ನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದೇನೆ. ನಾನು ನಿಮ್ಮಷ್ಟು ಜಾಣನಲ್ಲದಿದ್ದರೂ ಪರವಾಗಿಲ್ಲ, ನಾನು ಸ್ವಲ್ಪ ದಡ್ಡನಿರಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಒಂದು ವಿಚಾರವನ್ನು ಹೇಳಿದ್ದಾರೆ. ಕನ್ನಡದಲ್ಲಿ ಮಾತನಾಡುವಂಥ ವಿಚಾರದಲ್ಲಿ ಯಾರೂ ಪಕ್ಷಪಾತವನ್ನು ಮಾಡುವುದ್ದು ಸರಿಯಲ್ಲ. ಮಾನ್ಯ ಪಶುಸಂಗೋಪನಾ ಮಂತ್ರಿಗಳು ಮಾತನಾಡುವಂಥ ಸಂದರ್ಭದಲ್ಲಿ ನಾವು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೆವು. ಆದರೆ ಅವರಿಗೆ ಕನ್ನಡದ ಬಗ್ಗೆ ಅಭಿಮಾನವಿಲ್ಲವೆಂದು ನಾನು ಹೇಳಿಲಿಲ್ಲ. ಅವರೂ ಕೂಡ ಹೈದ್ರಾಬಾದ್ ಕರ್ನಾಟಕದಿಂದ ಬಂದವರು. ಪಂತ್ ಮಾಣಿಕ್ಯ ನಾವ್ ಪಾಟೀಲ್‌ರವರು ಸಹ ಹೈದ್ರಾಬಾದ್ ಕರ್ನಾಟಕದಿಂದ ಬಂದವರು. ಆದರೆ ಮಾನ್ಯ ಸದಸ್ಯರು ಕಂಗ್ಲೀಷ್‌ನಲ್ಲಿ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಗಮನಿಸಿ ಚುರುಕಿನಿಂದ ಕನ್ನಡದಲ್ಲಿ ಮಾತನಾಡುವಂತೆ ತಿಳಿಸಿದ್ದಾರೆ,

ಶ್ರೀ ವೆಂಕಟೇಲ್ ಬಿ. ಫರ್ನಾಂಡೀಸ್.—ಅವರು ಚುರುಕಿನಿಂದ ಇರುವುದರಿಂದಲೇ ಅವರು ಮುಖ್ಯಮಂತ್ರಿಯಾಗಿರುವುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಬಹಳ ಚುರುಕು ಬುದ್ಧಿಯಿಂದ ಗಮನಿಸಿ ಹೇಳಿದ್ದಾರೆ ನನಗೆ ಬಹಳ ಸಂತೋಷ. ಆದರೆ ಶ್ರೀಮಾನ್ ರಾಚಯ್ಯನವರ ಬಗ್ಗೆ ಏನೂ ತೀರ್ಮಾನವಾಗಿಲ್ಲವೆಂದು ಹೇಳಿದ್ದಾರೆ. ಆದರೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ರಂಗನಾಥ ರವರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಆ ಸಲಹೆ ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳವರು ಆ ಮಂತ್ರಿಯನ್ನು ಸಸ್‌ಪೆಂಡ್ ಮಾಡಿ ಮನೆಗೆ ಕಳುಹಿಸಲಿ ಎಂದು ಹೇಳಿದ್ದಾರೆ. ಅದನ್ನು ತಾವು ಪರಿಶೀಲನೆ ಮಾಡಿದರೆ ಒಳ್ಳೆಯದು.

ಬಾಗಲಕೋಟೆ ಸಿಮೆಂಟ್ ಕಾರ್ಖಾನೆಯ ಕೆಲಸಗಾರರಿಂದ ಮುಷ್ಕರದ ಬಗ್ಗೆ

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಇವತ್ತು ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿಯ ಕೆಲಸಗಾರರು ೧೯-೧೨-೮೯ರಿಂದ ಸುಮಾರು ೫೫ ಜನರು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅವರು ಸತ್ಯಾಗ್ರಹವನ್ನು ಮಾಡಲು ಪ್ರಾರಂಭ ಮಾಡಿ ಸುಮಾರು ೩೦ ದಿನಗಳಿಗೆ ಮೀರಿದೆ. ಆದರೆ ಅವರು ಈಗ ಮರಣಹೊಂದುವ ಪರಸ್ಥಿತಿಯಲ್ಲಿದ್ದಾರೆಂದು ಹೇಳಿದರೂ ಅತಿಶಯೋಕ್ತಿಯಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿ ಕೊಂಡು ಅವರಿಗೆ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ೧೯೮೩ರ ಜನವರಿಯಲ್ಲಿ ಆ ಕೆಲಸಗಾರರ ಸಂಘದ ಅಧ್ಯಕ್ಷರಾಗಿರತಕ್ಕ ಶ್ರೀ ಎಸ್. ಬಿ. ಪಾಟೀಲ್‌ರವರು ಉಪವಾಸ ಕ್ರಮ ಕೈಗೊಂಡಾಗ, ಆಗ ಜಾನೇ ಅಧಿಕಾರವಹಿಸಿಕೊಂಡಿದ್ದ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಮತ್ತು ಹಿಂದಿನ ಕಾರ್ಮಿಕ ಮಂತ್ರಿಗಳಾದ ಶ್ರೀ ವಿ. ಎಲ್. ಪಾಟೀಲ್‌ರವರು ಕೆಲಸಗಾರರ ಸಮಸ್ಯೆಗಳನ್ನು ಬಗೆ ಹರಿಸು ತ್ತೇವೆಂದು ಹೇಳಿ, ಮಾಡುತ್ತಿದ್ದ ಉಪವಾಸವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಬೇಡಿದರು. ಅವರು ಹೇಳಿದ ಮಾತಿಗೆ ಮಾನ್ಯತೆಯನ್ನು ಕೊಟ್ಟು ಉಪವಾಸ ಸತ್ಯಾಗ್ರಹವನ್ನು ಕೈಬಿಟ್ಟರು. ಮಾನ್ಯ ಅಜೀಜ್‌ಸೇಠ್‌ರವರು ಹೊಸದಾಗಿ ಕಾರ್ಮಿಕ ಮಂತ್ರಿಗಳಾದ ಮೇಲೆ ಕಾರ್ಮಿಕ ಪ್ರತಿನಿಧಿಗಳು ಮತ್ತು ಆ ಭಾಗದ ಶಾಸಕರುಗಳ ತುರ್ತು ಸಭೆಯನ್ನು ಕರೆದು ಎರಡು ದಿವಸ ಚರ್ಚೆ ನಡೆಸಿದರು. ಎರಡು ದಿವಸ ಸಭೆ ನಡೆಸಿದರೂ ಯಾವುದೇ ರೀತಿಯ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಲಿಕ್ಕೆ ಅಜೀಜ್‌ಸೇಠ್‌ರವರಿಂದಾಗಲೀ ಸರ್ಕಾರದ ಅಧಿಕಾರಿಗಳಿಂದಾಗಲೀ ಸಾಧ್ಯವಾಗಲಿಲ್ಲ. ಇದಾದ ನಂತರ ಜಾಯಿಂಟ್ ಕನ್ಸಿಲಿಯೇಷನ್ ಕಮಿಟಿಯನ್ನು ಕರೆದರು, ಅದರ ವರದಿ ಕೂಡ ಸರ್ಕಾರದ ಮುಂದಿದೆ. ಅಂದಿನಿಂದ ಇವತ್ತಿನವರೆಗೂ ಸತತವಾಗಿ ಮ್ಯಾನೇಜ್‌ಮೆಂಟ್‌ನವರ ಜೊತೆಯಲ್ಲಿ ಕಾರ್ಮಿಕರು ಹೋರಾಟ ಮಾಡಿಕೊಂಡು ಬಂದಿದ್ದಾರೆ. ಕಾರ್ಮಿಕರ ನ್ಯಾಯಯುತವಾದ ಬೇಡಿಕೆಗಳನ್ನು ಚರ್ಚೆಮಾಡುವುದಕ್ಕೆ ಮ್ಯಾನೇಜ್‌ಮೆಂಟ್‌ನವರು ಬರುತ್ತಿಲ್ಲ. ಒಂದು ವರ್ಷದ ನಿಷ್ಕ್ರಿಯಾವಧಿಯಲ್ಲಿ ಮ್ಯಾನೇಜ್‌ಮೆಂಟ್ ನವರನ್ನು ಕರೆಸಿ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡುವುದಕ್ಕೆ ಆಗಿಲ್ಲ.ಮ್ಯಾನೇಜ್‌ಮೆಂಟ್‌ನವರನ್ನು

ಮಿಟಿಂಗ್‌ಗೆ ಕರೆಸುವುದಕ್ಕೆ ನಿಮಗೆ ಯೋಗ್ಯತೆ ಇಲ್ಲ. ಮಿಟಿಂಗ್ ಇದೆ ಮ್ಯಾನೇಜ್‌ಮೆಂಟ್‌ನವರಂ ಬನ್ನಿ ಎಂದು ನೀವು ಅವರಿಗೆ ಹೇಳಿದರೆ, ಅವರು ನಿಮಗೆ ಫೋನ್ ಮಾಡಿ ಮಿಟಿಂಗ್ ಬರಂವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಈ ತರಹ ಆದರೆ ಕಾರ್ಮಿಕ ಇಲಾಖೆ ಏತಕ್ಕೆ ಇರಬೇಕು ? ಮೊದಲು ಕಾರ್ಮಿಕ ಇಲಾಖೆಯನ್ನು ಕಿತ್ತುಹಾಕಿಯೆಂದು ನಾನಂ ಒತ್ತಾಯ ಮಾಡುತ್ತೇನೆ. ಕೆಲಸಗಾರರಂ ಉಪವಾಸ ಕೈಗೊಂಡು ೩೦ ದಿನಗಳಾಯಿತು. ಸರ್ಕಾರ ಅವರ ಜೊತೆಯಲ್ಲಿ ಮಾತನಾಡುವ ಸೌಜನ್ಯತೆಯಂನ್ನು ಸಹ ತೋರಿಸಿಲ್ಲ. ಅವರಿಗೆ ಯಾವುದೇ ರೀತಿಯ ಕಾಗದ ಬರೆದಿಲ್ಲ. ಈ ಸರ್ಕಾರಕ್ಕೆ ಯೋಗ್ಯತೆಯಿಲ್ಲವೆಂದು ನಾನಂ ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

SRI AZEEZ SAIT.—Is this matter in to-day agenda. I have got a notice pertaining to this matter but that would come up on some other day.

ಅಧ್ಯಕ್ಷರು.—ಇವತ್ತು ಇದೆ. ನಿಯಮ ೩೫ರ ಪ್ರಕಾರ ಇವತ್ತು ಆ ವಿಷಯವನ್ನು ಎತ್ತಿದ್ದಾರೆ.

SRI AZEEZ SAIT.—Then, I will get reply now. Not that I can not reply now. But he has quoted some dates and all. I will give a detailed reply.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಜೆ. ಡಿ. ಸೋಮಪ್ಪನವರು, ಶ್ರೀ ಎಸ್. ಬಂಗಾರಪ್ಪ.

ಶ್ರೀ ಎಂ. ಎಸ್. ಕೃಷ್ಣನ್.—ಇದೇನಂ ಸ್ವಾಮಿ ? ಮೊದಲಿನದಕ್ಕೆ ಉತ್ತರವಿಲ್ಲ.

ಅಧ್ಯಕ್ಷರು.—ಮಾನ್ಯ ಕಾರ್ಮಿಕ ಮಂತ್ರಿಗಳು ಉತ್ತರ ತರಿಸುತ್ತೇನೆಂದು ಹೇಳಿದ್ದಾರೆ,

(INTEREUPTIEN)

MR. SPEAKER.—No, I canot force the Minister to reply right now ಇವತ್ತಂ ನಿಯಮ ೬೮ ಮತ್ತು ೬೯ರ ಪ್ರಕಾರ ಶ್ರೀ ಉಗ್ರನರಸಿಂಹಪ್ಪನವರ ವಿಷಯದ ಬಗ್ಗೆ ಚರ್ಚೆ ಮಾಡಲಂ ಒಂದಂ ಗಂಟೆ ಕಾಲಾವಕಾಶವನ್ನು ನಿಗದಿ ಮಾಡಲಾಗಿದೆ. ಮಾನ್ಯ ಸದಸ್ಯರಾದ ಬಂಗಾರಪ್ಪನವರು ೫–೬ ನೋಟೀಸ್‌ಗಳನ್ನು ಕಳುಹಿಸಿದ್ದಾರೆ. ನಿಯಮ ೩೫ರ ವ್ಯಾಪ್ತಿಯೊಳಗೆ...

ಶ್ರೀ ಎಸ್. ಬಂಗಾರಪ್ಪ.—ದಯವಿಟ್ಟು ಕ್ಷಮಿಸಬೇಕು, ನಾನಂ ಪುನಃ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗುತ್ತದೆ. ತೀರ್ಮಾನವಾಗಿದ್ದು ಒಂದು,...

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ...

ಶ್ರೀ ಎಸ್. ಬಂಗಾರಪ್ಪ.—ದಯಮಾಡಿ ನಾನಂ ಹೇಳುವುದನ್ನು ಕೇಳಬೇಕು. ನಾವು ಒಂದು ವಿಚಾರವನ್ನು ತೆಗೆದುಕೊಂಡು ನೋಟೀಸ್ ಕಳುಹಿಸುತ್ತೇವೆ. ಈ ವಿಷಯಂ ಬಿಸಿನೆಸ್ ಅಡ್ವೈಜರಿ ಕಮಿಟಿ ಮುಂದೆ ಚರ್ಚೆಗೆ ಬಂದಾಗ ಉತ್ತರವನ್ನು ಅದೇ ದಿವಸ ತರಿಸಿಕೊಡಲಿಕ್ಕೆ ಆಗದಿದ್ದರೂ ಚರ್ಚೆ ಮಾಡಬಹುದು. ನಮ್ಮಲ್ಲಿ ಅದೇ ದಿವಸ ಉತ್ತರ ಕೊಟ್ಟಂತಹ ದಾಖಲೆಗಳು ಇವೆ. ಅದೇ ದಿವಸ ಉತ್ತರ ತರಿಸಿ ಕೊಡಲಿಕ್ಕೆ ಆಗದೇ ಇರಬಹುದಂ. ಸರ್ಕಾರ ಅದೇ ದಿವಸ ಉತ್ತರ ಕೊಟ್ಟಿದ್ದು ಇದೆ.

ಅಧ್ಯಕ್ಷರು.—ಇವತ್ತು ನೀವು ೫ ವಿಷಯಗಳ ಬಗ್ಗೆ ನೋಟೀಸ್ ಕಳುಹಿಸಿದ್ದೀರಿ. ನಿಯಮ ೩೫ಕ್ಕೆ ಇಡೀ ದಿವಸ ಹೋಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು, ಯಾವುದೇ ವಿಷಯವನ್ನು ಪ್ರಸ್ತಾಪ ಮಾಡಿದ ತಕ್ಷಣ ಉತ್ತರವನ್ನು ಅದೇ ದಿವಸ ಕೊಡುವುದಕ್ಕೆ ಆಗುವುದಿಲ್ಲ. ತತ್‌ಕ್ಷಣ ಒಂದೆರಡು ಮಾತುಗಳನ್ನು ಹೇಳಿದರೂ ನಾವು ಕುಳಿತುಕೊಳ್ಳುತ್ತೇವೆ. ನಾವು ಕಾರ್ಯಕ್ರಮದ ಪಟ್ಟಿಯಲ್ಲಿ ಹಾಕಿದ್ದೀರಿ ಉತ್ತರ ರೆಡಿಯಾಗಿದೆಯೆಂದು ಕೇಳಿಕೊಂಡಿದ್ದೇನೆ. ಈ ರೀತಿ ಸದಸ್ಯರ ಹಕ್ಕನ್ನು ತಾವು ಮೊಟಕು ಮಾಡುವುದು ಸೂಕ್ತವಲ್ಲ.

ಅಧ್ಯಕ್ಷರು.—ತಾವು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ಬಹಳ ಮುಖ್ಯವಾದ ವಿಷಯಗಳ ಬಗ್ಗೆ ನಾಲ್ಕೈದು ನೋಟೀಸ್‌ಗಳನ್ನು ಕೊಟ್ಟಿದ್ದೇನೆ. ಬಹಳ ಪ್ರಾಮುಖ್ಯವಾದ ವಿಷಯವೆಂದರೆ ಇವತ್ತಿನ ದಿವಸ 'ಬೆಂಗಳೂರು ಬಂದ್' ನಡೆಯುತ್ತಿದೆ. ಅದಕ್ಕೆ ಸಂಬಂಧಪಟ್ಟಹಾಗೆ ಒಂದು ನೋಟೀಸ್ ಕೊಟ್ಟಿದ್ದೇನೆ ಬೆಂಗಳೂರು ಬಂದ್‌ಗೆ ಕರೆ ಕೊಟ್ಟಿರತಕ್ಕವರು ಡಾ. ರಾಜಕುಮಾರ್ ಸಂಘದವರು. ಸರ್ಕಾರಿ ನೌಕರರಿಗೆ ನೇಮಕ ಮಾಡಿಕೊಳ್ಳುವಾಗ ಕಡ್ಡಾಯವಾಗಿ ಕನ್ನಡದಲ್ಲಿ ಪರೀಕ್ಷೆಯಾಗಬೇಕೆಂದು ಅವರು ಬಂದ್‌ಗೆ ಕರೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ಸಂಕ್ಷಿಪ್ತವಾಗಿ ಸಭೆಯ ಗಮನಕ್ಕೆ ತನ್ನಿ.

ಶ್ರೀ ಎಸ್. ಬಂಗಾರಪ್ಪ.—ಆಡಳಿತದಲ್ಲಿ ಮತ್ತು ಶಿಕ್ಷಣದಲ್ಲಿ ಕನ್ನಡ ಕಡ್ಡಾಯವಾಗಿರಬೇಕು. ಕನ್ನಡ ಭಾಷೆಗೆ ಎಲ್ಲೂ ಅಡ್ಡಿ ಮಾಡಬಾರದೆಂದು ಅವರ ಬೆಂಗಳೂರು ಬಂದ್‌ಗೆ ಕರೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ವಿಷಯ ಅದಲ್ಲ, ಮೊದಲೇ ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಕೆಳಗಿನಿಂದ ಹಿಡಿದು ರಾಜ್ಯದ ಮುಖ್ಯಕಾರ್ಯದರ್ಶಿಗಳವರೆಗೂ ಕನ್ನಡದಲ್ಲಿಯೇ ವ್ಯವಹಾರ ನಡೆಯಬೇಕು. ಈ ನಿರ್ಣಯವನ್ನು ಹಿಂದಿನ ಸರ್ಕಾರವೇ ತೆಗೆದುಕೊಂಡಿತ್ತು. ಈ ಸರ್ಕಾರ ಹೊಸದಾಗಿ ಏನೂ ತೆಗೆದುಕೊಂಡಿಲ್ಲ. ಯಾವುದೇ ಒಂದು ಮಾತು ಹೇಳಿದ ಮೇಲೆ, ಕನ್ನಡದಲ್ಲಿಯೇ ನಾವು ಪರೀಕ್ಷೆ ನಡೆಸುತ್ತೇವೆಂದು ಒಂದು ಸಾರಿ ಹೇಳಿದ ಮೇಲೆ ಅದನ್ನು ಪಾಲನೆ ಮಾಡತಕ್ಕ ತೀರ್ಮಾನಕ್ಕೆ ಬರಬೇಕು. ಭಾಷಾ ಅಲ್ಪಸಂಖ್ಯಾತರಿಗೆ ಭಾಷೆಯನ್ನು ಕಲಿಯದೆ ಇರತಕ್ಕವರಿಗೆ ಕಾಲವನ್ನು ನಿಗದಿ ಮಾಡತಕ್ಕದ್ದು ನಮಗೂ ಗೊತ್ತಿದೆ. ಅಲ್ಪಸಂಖ್ಯಾಂತರು ಅಂದರೆ ಉರ್ದು, ತಮಿಳು, ಮರಾಠಿ ಮತ್ತು ತೆಲಗು ಅದು ಯಾವುದೇ ಭಾಷೆಯವರು ಇರಲಿ ಅವರು ಕನ್ನಡವನ್ನು ಕಲಿತುಕೊಳ್ಳಬೇಕು. ಕನ್ನಡವನ್ನು ಕಲಿತಿದ್ದರೆ ಸರ್ಕಾರಿ ಳಿನೇ ದರ್ಜೆ ನೌಕರಿ ತತ್‌ಕ್ಷಣ ಸಿಗುತ್ತದೆ. ಕನ್ನಡವನ್ನು ಕಲಿತಿದ್ದರೆ ಬೇಗ ಸರ್ಕಾರಿ ಉದ್ಯೋಗಕ್ಕೆ ಸೇರಿಕೊಳ್ಳಬಹುದು ಕನ್ನಡ ಕಲಿತವರಿಗೆ ಅನುವು ಮಾಡಿಕೊಡಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು ಮತ್ತು ಕನ್ನಡದ ಹಿತರಕ್ಷಣೆಯನ್ನು ಮಾಡಬೇಕೆನ್ನುವ ಅಭಿಪ್ರಾಯವನ್ನು ಇಟ್ಟುಕೊಂಡು ಅವರು ಬಂದ್ ಆಚರಿಸುವ ಕೆಲಸ ಮಾಡುತ್ತಿದ್ದಾರೆ. ೩-೪ನೇ ದರ್ಜೆ ನೌಕರಿಗೆ ನೇಮಕ ಮಾಡಿಕೊಳ್ಳುವಾಗ ನೇಮಕಾತಿಯ ಪೂರ್ವದಲ್ಲಿ ನಾವು ಕನ್ನಡದಲ್ಲಿಕಡ್ಡಾಯ ಪರೀಕ್ಷೆ ನಡೆಸುವುದರಿಂದ ಅವರಿಗೆ ಅನುಕೂಲವಾಗುತ್ತದೆ.ಅದಕ್ಕೆ ಬೇಕಾದ ಅನುಕೂಲಗಳನ್ನು ಸರ್ಕಾರ ಮಾಡಬೇಕು. ಅದಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಸಾಹಿತಿಗಳು, ಕಲಾವಿದರು ಇನ್ನು ಅನೇಕ ಕ್ಷೇತ್ರಗಳಲ್ಲಿ ದುಡಿಯುತ್ತಿರತಕ್ಕವರು ಕ್ರಮ ಕೈಗೊಂಡು ಕನ್ನಡದ ಬಗೆ ಸ್ಪಷ್ಟವಾಗಿ ಪ್ರತಿಪಾದನೆ ಮಾಡಿದ್ದಾರೆ,

೧-೩೦ ಪಿ. ಎಂ.

ಇವತ್ತು ಮೂರನೇ ಮತ್ತು ನಾಲ್ಕನೇ ದರ್ಜೆ ನೌಕರರಿಗೆ ಕನ್ನಡ ಕಡ್ಡಾಯ ಮಾಡುವ ವಿಚಾರವಾಗಿ ಮಾತನಾಡಿದ್ದೇವೆ. ಡಾಕ್ಟರ್ ರಾಜಕುಮಾರ್ ಅಭಿಮಾನಿಗಳ ಸಂಘದವರು ಕನ್ನಡದಲ್ಲಿ ವಿಶಾಲವಾಗಿ ಬೆಳೆಯತಕ್ಕಂಥ ಸಂಘ. ಸಾವಿರಾರು ಸಂಘಗಳನ್ನು ಮರಿಸಂಘಗಳನ್ನು ಇದು ಪಡೆದುಕೊಂಡಿದೆ. ಅವರು ಒತ್ತಾಯ ಮಾಡುತ್ತಿರುವುದು ಏನೆಂದರೆ ಕನ್ನಡಕ್ಕೆ ಪ್ರಾಮುಖ್ಯತೆ ಅಥವಾ ಪ್ರಾಧಾನ್ಯತೆಯನ್ನು ಕೊಡುತ್ತೇವೆ ಎಂದು ಸರ್ಕಾರ ಹೇಳಿತ್ತೋ, ಅಷ್ಟು ಪ್ರಮಾಣದಲ್ಲಿ ಕೊಡುತ್ತಿಲ್ಲವೆಂದು ಸ್ಪಷ್ಟವಾದ ಅಭಿಪ್ರಾಯಕ್ಕೆ ಅವರು ಬಂದಿದ್ದಾರೆ. ಅವರು ಏಳೆಂಟು ದಿವಸಗಳ ಹಿಂದೆ ಸತ್ಯಾಗ್ರಹವನ್ನು ಕೂಡ ಮಾಡಿದ್ದಾರೆ. ಸರದಿ ಉಪವಾಸ ಸತ್ಯಾಗ್ರಹವನ್ನು ಮಾಡಿದ್ದಾರೆ. ಈ ದಿವಸ ಬೆಂಗಳೂರು ಬಂದ್‌ಗೆ ಕರೆಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಬೆಂಗಳೂರು ಬಂದ್ ಸಂಪೂರ್ಣವಾಗಿ ಯಶಸ್ವಿಯಾಗಿದೆ ಎಂಬುದು ನಮಗೆ ಗೊತ್ತಿದೆ. ಇದಕ್ಕಾಗಿ ನಾನು ಈ ಸಂಘಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತು ಈ ಬಂದ್‌ಗೆ ಯಾರ್ಯಾರು ಬೆಂಬಲ ಕೊಟ್ಟಿದ್ದಾರೆ, ಅವರೆಲ್ಲರಿಗೂ ಕೂಡ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ರಾಜಕುಮಾರ್ ಅವರಿಗೂ ಸಹ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ನಾನು ಒಪ್ಪುತ್ತೇನೆ ಏನೆಂದರೆ ಯಾರೂ ಸಮಾಜ ಘಾತಕ ಶಕ್ತಿಗಳು ಇದ್ದಾರೆ, ದುಷ್ಕರ್ಮಿಗಳು ಇರಬಹುದು, ಅವರು ಈ ಬಂದನ್ನು ದುರುಪಯೋಗಪಡಿಸಿಕೊಳ್ಳದ ಹಾಗೆ ಜವಾಬ್ದಾರಿಯನ್ನು ಸರ್ಕಾರ ಹೊರಬೇಕಾಗುತ್ತದೆ. ಈ ಮಾತನ್ನು ನಾವು ಒಪ್ಪೋಣ. ಸರ್ಕಾರದ ಆಸ್ತಿಪಾಸ್ತಿಗಳಿರಬಹುದು,

ಪಾಸಗಿ ಆಸ್ತಿಪಾಸ್ತಿ ಇರಬಹುದು ಇವುಗಳಿಗೆ ಹಾನಿಯಾಗದಂತೆ ಸರ್ಕಾರ ರಕ್ಷಣೆ ಕೊಡಬೇಕಾಗುತ್ತದೆ ಆದರೆ ಇದೇ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಆಡಿದ್ದಾರೆ. ಕೆಲವು ಜನ ಕಾಂಗ್ರೆಸ್ (ಐ) ಕಾರ್ಯಕರ್ತರು ನಪ್ಮರ್ಿಗಳು ಎನ್ನುವ ಅರ್ಥದಲ್ಲಿ, ಈ ಡಾಕ್ಟರೆ ರಾಜಕುಮಾರ ಅಭಿಮಾನಿಗಳ ಸಂಘದಲ್ಲಿ.....

ಅಧ್ಯಕ್ಷರು.—ಈ ವಿಚಾರ ಇದರಲ್ಲಿ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ —ಇದು ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು —ನಿಯಮಾವಳಿ ಪ್ರಕಾರ ಇದನ್ನು ಸಭೆಯ ಗಮನಕ್ಕೆ ತಂದುದಿಡಿ, ಅದಾದಿಟ್ಟು ದೀರ್ಘವಾಗಿ ಭಾಷಣ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿನ್ನೆ ಮುಖ್ಯಮಂತ್ರಿಗಳೂ ಕೂಡ ಅವಾವಶ್ಯಕವಾಗಿ ಈ ಮಾತನು ಆಡಿದ್ದಾರೆ. ಮಾನ್ಯ ಅಧ್ಯಕ್ಷರು ದಯವಿಟ್ಟು ಇದನ್ನು ಗಮನಿಸಬೇಕು. ನಿನ್ನೆ ಅವರು ಹೇಳಿ ಸಂದರ್ಭದಲ್ಲಿ ಕೆಲವು ಜನ ಕಾಂಗ್ರೆಸ್ (ಐ) ಕಾರ್ಯಕರ್ತರು ಹೋಗಿ ಡಾಕ್ಟರ್ ರಾಜಕುಮಾರ್ ಅಭಿ ಮಾನಿಗಳ ಸಂಘದಲ್ಲಿ ತೂರಿಕೊಂಡಿದ್ದಾರೆ. ರೈತಸಂಘದಲ್ಲಿ ತೂರಿಕೊಂಡಿದ್ದಾರೆ ಎನ್ನತಕ್ಕಂಥ ಮಾತನ್ನು ಆಡಿ ಸ್ಪಷ್ಟವಾಗಿ ರಾಜಕೀಯ ಬಣ್ಣ ಲೇಪನ ಮಾಡತಕ್ಕಂಥ ಅವ್ಯಾಮಾನಿಕ ಕೆಲಸಕ್ಕೆ ಕೈ ಹಾಕಿದ್ದಾರೆ. ಜೊತೆಗೆ ಇದೇ ಸಂದರ್ಭದಲ್ಲಿ...

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಒಂದು ಕ್ರಿಯಾಲೋಪ ಇದೆ. ವಿಷಯ ಬಹಳ ಗಹನವಾಗಿದೆ ನಿಯಮಾವಳಿ ೫೫ಳಿರ ಸೀಮಿತ ಪ್ರದೇಶವನ್ನು ಮೊದಲು ತಾವು ಗೊತ್ತು ಮಾಡಬೇಕು. ಅದ ಇಲ್ಲದೇ ಹೋದರೆ ಇದರಲ್ಲಿ ಏನು ಹೇಳಿದೆಯೆಂದರೆ "may be raised" ಅಂತ ಇದೆ.

ಶ್ರೀ ಎಸ್. ಬಂಗಾರಪ್ಪ —ಇದನ್ನೇ ನಾನು ರೈಸ್ ಮಾಡುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್. ನಾನು ಮಾನ್ಯ ಬಂಗಾರಪ್ಪನವರು ಮಾತನಾಡುವಾಗ...

ಅಧ್ಯಕ್ಷರು.—ವಿಷಯವನ್ನು ಸಭೆಯ ಗಮನಕ್ಕೆ ತರಬೇಕು. ಇಷ್ಟೇ ಇಲ್ಲಿ ಮುಖ್ಯವಾದುದ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಬಂಗಾರಪ್ಪನವರು ಮಾತನಾಡುವಾಗ ನಾನು ಚಕಾರ ಶಬ್ದ ಕೂಡ ಎತ್ತಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮತ್ತೆ ನಾನು ಮಾತನ್ನು ಮುಂಗಿಸುವುದಕ್ಕೆ ಮಂಜೆಯೇ ಎದ್ದು ನಿಂತಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಮಾನ್ಯ ಅಧ್ಯಕ್ಷರ ಅನುಮತಿ ಪಡೆದುಕೊಂಡು ಮಾತನಾಡ ತ್ತಿದ್ದೇನೆ. ಸ್ವಾಮಿ ಅಧ್ಯಕ್ಷರೇ, ಈ ನಿಯಮಾವಳಿಯ ಸೀಮಿತ ಪ್ರದೇಶವನ್ನು ಗೊತ್ತು ಮಾಡಿದ ಬಳಿಕವಾದರೂ ವಿಷಯ ಪ್ರಸ್ತಾವನೆ ಎನ್ನುವುದಕ್ಕೆ 'ಪ್ರಸ್ತಾವನೆ' ಶಬ್ದಕ್ಕೆ ಏನು ಬೇಕಾದರೂ ಅರ್ಥ ಕೊಡುವುದಕ್ಕೆ ಸಾಧ್ಯವಿಲ್ಲ. ಉಪಯೋಗಿಸಕ್ಕೆ ಪದಕ್ಕೆ, ಉಪಯೋಗಿಸತಕ್ಕ ಪದಗಳ ಸಮೂಹಕ್ಕೆ ನಿಯಮಾವಳಿಯಲ್ಲಿ ಒಂದು ಲರ್ಥವನ್ನು ಕಲ್ಪಿಸಿ ಆ ಅರ್ಥದ ಸೀಮಾರೇಖೆಯು ಒಳಗಡೆ, ವ್ಯಾಪ್ತಿಯ ಒಳಗಡೆ ವಿಷಯದ ಪ್ರಸ್ತಾವನೆ ಆಗಬೇಕು. ಇದನ್ನು ಬಿಟ್ಟು ಇದರ ಸೀಮಾರೇಖೆಯನ್ನ ವಿಪ್ಪು ದೂರ ಬೇಕಾದರೂ ತೆಗೆದುಕೊಂಡು ಹೋಗುವುದು ಸರಿಯಲ್ಲ. ಈಗ ಇಲ್ಲಿ ಸಭೆಯ ಬಿ ಕಾರ್ಯಕಲಾಪಗಳಿಗೆ ಅಡ್ಡಿ ಬರತಕ್ಕಂಥ ಒಂದು ಸನ್ನಿವೇಶ ಇದೆ. ಇದನ್ನು ತಾವು ಪರಿಗಣಿಸಿ ನಿಯಮಾವಳಿಗೆ ಸೀಮಾರೇಖೆಯನ್ನು, ಒಂದು ಪರಿಮಿತಿಯನ್ನು ಗೊತ್ತು ಮಾಡಬೇಕೆಂದು ತಮ್ಮ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ಹೇಳಿದ್ದೇನೆ. ೫೫ಳಿರ ನಿಯಮಾವಳಿ ಪ್ರಕಾರ ವಿಷಯವನ್ನು ಸಭೆಯ ಗಮನಕ್ಕೆ ತರಬಹುದಿದ್ದು. ಇದಕ್ಕಾಗಿ ಸರ್ಕಾರವನ್ನು ಉತ್ತರ ಕೊಡಲೇಬೇಕೆಂದು ಒತ್ತಾಯ ಮಾಡುವುದಕ್ಕಾಗುವುದಿಲ್ಲ. ಸಾಧ್ಯವಾದರೆ ಮಂತ್ರಿಗಳು ಉತ್ತರ ಹೇಳಿ ಎಂದು ಕೇಳಿದ್ದೇನೆ. ಇದಕ್ಕೆ ದೀರ್ಘವಾಗಿ ಭಾಷಣ ಮಾಡುತ್ತಾ ಹೋದರೆ ೫೫ಳಿನೇ ನಿಯಮಾವಳಿಗಾಗಿ ದಿನವೆಲ್ಲ ವೆಚ್ಚಮಾ ಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಾನು ಸ್ವಲ್ಪದರಲ್ಲೇ ಮುಗಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಏತಕ್ಕಾಗಿ ಈ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ...

ಶ್ರೀ ಕೆ. ಜೆ. ಮಹೇಶ್ವರಪ್ಪ.—ನಿಯಮ ೩೩ಳಿರಲ್ಲಿ ವಿಷಯ ಸೂಚಿಸುವುದಕ್ಕೂ ಅನುಮತಿ ದೊರೆಯಬೇಕು. ಸೂಚಿಸುವುದು ಎಂದರೆ ದೀರ್ಘವಾಗಿ ಭಾಷಣ ಮಾಡುವುದು ಹೇಗಾಗುತ್ತದೆ ? ಅಧ್ಯಕ್ಷರೇ, ಸೂಚಿಸುವುದರ ವ್ಯಾಪ್ತಿಯ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ಇದರಲ್ಲಿ ಭಾಷಣ ಮಾಡುವುದಕ್ಕಾಗುವುದಿಲ್ಲ. ಸಭೆಗೆ ಅರ್ಥವಾಗುವಹಾಗೆ ವಿಷಯದ ವ್ಯಾಪ್ತಿ ಇರಬೇಕು. ನಾನು ಅವರಿಗೆ ಹೇಳಿದ್ದೇನೆ ಬಿಡಿ.

ಶ್ರೀ ಎಸ್. ಬಂಗಾರಪ್ಪ. ನಾನು ಹೇಳುವುದು ಇನ್ನೂ ಇದೆ.

ಅಧ್ಯಕ್ಷರು.—ವಿಷಯ ಪ್ರಸ್ತಾಪಿಸಿದ್ದೀರಿ. ಇಲ್ಲದೇ ಹೋದರೆ ನೋಟೀಸ್‌ನಲ್ಲಿ ಏನು ಹೇಳಿದ್ದೀರಿ, ಅದನ್ನು ಓದುವುದಕ್ಕಷ್ಟೇ ಪರಿಮಿತಿಯನ್ನು ಸೀಮಿತಗೊಳಿಸಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಆಗಲೇ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದರೆ ಇಷ್ಟರೊಳಗೆ ಮುಗಿದು ಹೋಗುತ್ತಿತ್ತು. ಏಕೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅಬ್ಕಾರಿ ಸಚಿವರು ಇಬ್ಬರೂ ಕೂಡಿ ಸದನದಲ್ಲಿ ಹೇಳಿರತಕ್ಕಂಥಾದ್ದು ದಾಖಲೆ ಇದೆ. ಅದಕ್ಕಾಗಿ ಪ್ರಸ್ತಾಪ ಮಾಡಬೇಕಾಯಿತು.

ಅಧ್ಯಕ್ಷರು.—ಇದನ್ನು ನೀವು ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡಬಹುದಲ್ಲ ?

ಶ್ರೀ ಎಸ್. ಬಂಗಾರಪ್ಪ.—ಇದನ್ನು ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು.—ಬೇರೆ ಸಂದರ್ಭಗಳು ಇವೆಯಲ್ಲ. ಗವರ್ನರ್ ಅಡ್ರೆಸ್ ಇದೆ. ಇದಕ್ಕಾಗಿ ಬೇರೆ ನೋಟೀಸ್ ಕೊಡಿ.

ಶ್ರೀ ಎಸ್. ಬಂಗಾರಪ್ಪ.—ಸ್ವಲ್ಪದರಲ್ಲೇ ಹೇಳಿ ಮುಗಿಸುತ್ತೇನೆ. ನಿನ್ನೆ ಮಾತನಾಡಿದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಡಾಕ್ಟರ್ ರಾಜಕುಮಾರ್ ಅಭಿಮಾನಿಗಳ ಸಂಘದವರಿಗೆ ಎಚ್ಚರಿಕೆಯನ್ನು ಕೊಡತಕ್ಕಂಥ ಒಂದು ಪ್ರಯತನ್ನವನ್ನು ಅಪ್ರಮಾಣಿಕವಾಗಿ ಮಾಡಿದ್ದಾರೆ. ಇಲ್ಲಿ ಶ್ರೀಮಾನ್ ಜೆ. ಎಚ್. ಪಟೇಲ್ ಅವರು ನಿನ್ನೆದಿವಸ ಮಾತನಾಡಿದ್ದು ಪತ್ರಿಕೆಯಲ್ಲಿ ಬಂದಿದೆ. ಕನ್ನಡದ ಬಗ್ಗೆ ಅಭಿಮಾನವನ್ನು ಈ ಸರ್ಕಾರಕ್ಕೆ ಯಾರೂ ಹೇಳಬೇಕಾಗಿಲ್ಲ ಎಂದು ಮಾನ್ಯ ಅಬ್ಕಾರಿ ಸಚಿವರು ಹೇಳಿದ್ದಾರೆ. ಸಿನೇಮಾ ನಟರಿಂದ ಕನ್ನಡಾಭಿಮಾನವನ್ನು ನಾವು ಕಲಿಯಬೇಕಾಗಿಲ್ಲ ಎನ್ನುವ ಮಾತನ್ನು ಆಡಿದ್ದಾರೆ. ನಾನು ಹೇಳುತ್ತೇನೆ ಕನ್ನಡ ಅಭಿಮಾನ ಇರತಕ್ಕಂಥಾದ್ದು ಎಲ್ಲರಿಗೂ ಇರುತ್ತದೆ.

ಅಧ್ಯಕ್ಷರು.—ವಿವರಕ್ಕೆ ಹೋಗುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳಿರತಕ್ಕಂಥ ಮಾತು ದಾಖಲೆಯಲ್ಲಿ ಇರುವುದೇ ಆಗಿದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸಿನೇಮಾ ನಟರಿಂದ ಅಭಿಮಾನ ಕಲಿಯಬೇಕಾಗಿಲ್ಲ ಎನ್ನುವುದು ಅವರ ಅಭಿಪ್ರಾಯಂ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಕನ್ನಡದ ಬಗ್ಗೆ ಅಭಿಮಾನ ಅವರಿಗೂ ಕೂಡ ಇದೆ. ಇಲ್ಲ ವೆಂದು ನಾನು ಹೇಳಂವುದಿಲ್ಲ. ಅಭಿಮಾನ ಎನ್ನುವುದು ಎಲ್ಲರಿಗೂಕೂಡ ಇದೆ.

ಮಾನ್ಯ ಜಾಲಪ್ಪನವರಿಗೆ.....

ಅಧ್ಯಕ್ಷರು.—ಬಂಗಾರಪ್ಪನವರೇ ಇಲ್ಲಿ ನೋಡಿ. ನೀವು ವೈಯಕ್ತಿಕವಾಗಿ ಹೇಳುತ್ತಾ ಹೋದರೆ ಸಭೆಯಂ ಕಾರ್ಯಕಲಾಪಗಳನ್ನು ನಡೆಸುವುದಕ್ಕೇ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಆದ್ದರಿಂದ ಮಾನ್ಯ ಸಭಾಧ್ಯಕ್ಷರೇ, ಕನ್ನಡದ ಬಗ್ಗೆ ಅಭಿಮಾನವನ್ನು ಈ ಸರ್ಕಾರಕ್ಕೆ ಯಾರೂ ಹೇಳಬೇಕಾಗಿಲ್ಲವೆಂದು ಹೇಳಿದ್ದಾರೆ. ಇವತ್ತು ಬೆಳಿಗ್ಗೆ ನಡೆದಿರತಕ್ಕಂಥ ಘಟನೆಗಳನ್ನು ನೋಡಿದರೆ ಸರ್ಕಾರದ ಕಾರ್ಯಕಲಾಪಗಳಲ್ಲಿ ಕನ್ನಡದ ಬಗ್ಗೆ ಅಭಿಮಾನ ಇದ್ದಿದ್ದರೆ, ಇದನ್ನು ಹೇಳಬೇಕಾದ ಅವಶ್ಯಕತೆ ಇರಲಿಲ್ಲ. ನಿಮಗೆ ಇನ್ನೂ ಕನ್ನಡದ ಬಗ್ಗೆ ಅಭಿಮಾನ ಕಡಿಮೆ ಇದೆ.

ಆದ್ದರಿಂದ ನಿಮಗೆ ಇದನ್ನು ಹೇಳಬೇಕಾದ ಹಕ್ಕು ಎಲ್ಲರಿಗೂ ಇದೆ. ಸಿನೇಮಾ ನಟರಿಂದ ಕನ್ನಡ ಅಭಿಮಾನ ಕಲಿಯಬೇಕಾಗಿಲ್ಲ. ಡಾಕ್ಟರ್ ರಾಜಕುಮಾರ್ ಅವರಲ್ಲದೆ ಸಿನೇಮಾ ನಟರೆಂದರೆ ಇನ್ಯಾರು ?

(ಗೊಂದಲ)

ಅಧ್ಯಕ್ಷರು.—ಶ್ರೀ ಬಂಗಾರಪ್ಪನವರೇ ನಿಮ್ಮ ವ್ಯಾಪ್ತಿಯನ್ನು ಮೀರಿ ಹೋಗುತ್ತಿದ್ದೀರಿ. ನೀವು ಸಭೆಯ ಹಿರಿಯ ಸದಸ್ಯರು ಇದ್ದೀರಿ. ನಾನು ಪದೆಪದೇ ಹೇಳುವುದಕ್ಕೆ ಹೋಗುವುದಿಲ್ಲ. ವಿಷಯ ಸಿಖಿಲರ ವ್ಯಾಪ್ತಿಯನ್ನು ಇದಕ್ಕಿಂತ ಹೆಚ್ಚು ವಿಸ್ತರಿಸಬೇಡಿ.

ಶ್ರೀ ಎಸ್. ಬಂಗಾರಪ್ಪ.—ನಟರ ಬಗ್ಗೆ ಹೇಳಿರತಕ್ಕ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಂ.

(ಗೊಂದಲ)

ಅಧ್ಯಕ್ಷರು.—ಶ್ರೀಮಾನ್ ಪಿ. ರಾಂದೇವ್ ಅವರು ಈಗ ಮಾತನಾಡುವುದಕ್ಕೆ ನಾನು ಕರೆಯುತ್ತೇನೆ.

(ಗೊಂದಲ)

ಶ್ರೀ ಡಿ. ಹೆಚ್. ಪಟೇಲ್.—ನಾನು ಕನ್ನಡ ಅಭಿಮಾನದ ಬಗ್ಗೆ ಯಾರಿಂದಲೂ ಕಲಿಯು ಬೇಕಾದ್ದಿಲ್ಲ. ಶ್ರೀಮಾನ್ ಎಸ್. ಬಂಗಾರಪ್ಪನವರು ಸಹ ಸಿನಿಮಾ ನಟರಾಗಿದ್ದರು. ಅವರಿಂದಲೂ ಸಹ ನಾನು ಕಲಿಯ ಬೇಕಾದ್ದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳಿದ್ದನ್ನು ನಾನು ಮೆಚ್ಚುತ್ತೇನೆ. ಬಹಳ ಸಂತೋಷ.

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ, ರೂಲ್ ಸಿಖಿಲರ ಪ್ರಕಾರ ಈ ಸಿ ಮಂತ್ರಿ ಳನೇ ದರ್ಜೆಯ ನೌಕರರಿಗೆ ಕನ್ನಡ ಪರೀಕ್ಷೆಯ ಬಗ್ಗೆ ವಿನೊಂದು ರಿಯಾಯಿತಿಯನ್ನು ಸರ್ಕಾರದವರು ಕೊಟ್ಟಿದ್ದಾರೆ ಅದರ ಬಗ್ಗೆ ನಾನೂ ಸಹ ಒಂದು ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇನೆ. ಇದು ಜನತೆಯ ಸರ್ಕಾರ. ಜನತೆಗೆ ಇರತಕ್ಕಂಥಾ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೋಸ್ಕರವಾಗಿ ಡಾ. ರಾಜ ಕುಮಾರ್‌ರವರ ಒಂದು ಅಧ್ಯಕ್ಷತೆಯಲ್ಲಿ ನಮ್ಮ ಸರ್ಕಾರ ಒಂದು ಸಮಿತಿಯನ್ನು ರಚನೆ ಮಾಡಿದೆ. ಇದರ ಬಗ್ಗೆ ಈಪ್ಪೊತ್ತಿನ ದಿವಸ ಡಾ. ರಾಜಕುಮಾರ್‌ರವರ ಅಭಿಮಾನ ಸಂಘದವರು ಚಳುವಳಿಗೆ ಏನೊಂದು ಕರೆ ಕೊಟ್ಟಿದ್ದಾರೆ ಅದನ್ನು ನಿಲ್ಲಿಸಿ, ರಾಜ್ಯ ಸರ್ಕಾರದವರು ಅವರನ್ನು ಈ ಒಂದು ಸಮಿತಿಗೆ ಏನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ, ಅವರ ಆಹವಾಲನ್ನು ಡಾ. ರಾಜಕುಮಾರ್‌ರವರು ಒಪ್ಪುವ ಹಾಗೆ ಅವರೆಲ್ಲರೂ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಡಾ. ರಾಜಕುಮಾರ್‌ರವರ ಅಧ್ಯಕ್ಷತೆಯಲ್ಲಿ ಇವರು ಒಂದು ಸಮಿತಿ ಮಾಡುವ ಹಾಗೆ ಇದ್ದರೆ. ಈ ಸರ್ಕಾರ ಏತಕ್ಕೆ ಇರಬೇಕು ? ಇವರಿಗೆ ಶಕ್ತಿ ಇದ್ದರೆ ಇವರದ್ದೇ ಒಂದು ಸಮಿತಿ ಮಾಡಲಿ.

ಶ್ರೀ ಆರ್ ಎಲ್. ಜಾಲಪ್ಪ.—ಹಿಂದೆ ಶ್ರೀಮಾನ್ ಬಂಗಾರಪ್ಪನವರ ಅಧ್ಯಕ್ಷತೆಯಲ್ಲಿ ರೈತರ ಕಷ್ಟಸುಖಗಳನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಒಂದು ಸಮಿತಿ ರಚಿಸಿತು. ಹಾಗಾದರೆ ನಾವೂ ಕೇಳಬಹುದಾಗಿತ್ತಲ್ಲಾ ಆ ಸರ್ಕಾರ ಏತಕ್ಕೆ ಇರಬೇಕಾಗಿತ್ತು ಎಂದು ?

ಶ್ರೀ ಎಸ್. ಬಂಗಾರಪ್ಪ.—ಅದೇ ರೀತಿಯಾಗಿ ಬಹಳ ಸಮಿತಿಗಳಿವೆ ಆದರೆ ನಾನು ಕೇಳುವುದು ಇದಕ್ಕೆ ರಾಜಕುಮಾರ್‌ರವರ ಅಧ್ಯಕ್ಷತೆಯಲ್ಲಿ ಏತಕ್ಕೆ ಒಂದು ಸಮಿತಿ ಮಾಡಬೇಕಾಗಿತ್ತು ? ಈ ಕೆಲಸ ವನ್ನು ಸರ್ಕಾರವೇ ಮಾಡಬಹುದಾಗಿತ್ತಲ್ಲಾ.

ಅಧ್ಯಕ್ಷರು.—ಇದರ ಬಗ್ಗೆ ವಾದ ವಿವಾದ ಬೇಕಾಗಿಲ್ಲ. ನಿಯಮ ಸಿಖಿಲರ ಪ್ರಕಾರ ಏನು ಇದೆ ಅದಕ್ಕೆ ಮಾತ್ರ ವಿಷಯ ಸೀಮಿತವಾಗಿರಲಿ.

ಶ್ರೀ ಎಸ್' ಬಂಗಾರಪ್ಪ.—ಹಾಗಾದರೆ ನಾನು ಸರ್ಕಾರವನ್ನು ಕೇಳುವುದೇನೆಂದರೆ ಹರಿಜನರಿಗೆ ಭೂಮಿ ಹಂಚುವ ಬಗ್ಗೆ ಏತಕ್ಕೆ ಒಂದು ಸಮಿತಿ ಮಾಡಲಿಲ್ಲ ಎಂದು ಕೇಳುತ್ತೇನೆ, ಬರೇ ದೊಂಬರಾಟ ಮಾಡಿ ರಾಜಕೀಯ ಬಣ್ಣ ಬಳಿಯಬೇಡಿ.

ಶ್ರೀ ಪಿ. ರಾಂದೇವ್.—ನಾವೇನೂ ದೊಂಬರಾಟ ಮಾಡುವುದಕ್ಕೆ ಹೋಗುವುದಿಲ್ಲ. ಡಾ. ರಾಜಕುಮಾರ್‌ರವರು ಕಡ್ಡಾಯ ಅಭಿವನಿಗಳು, ಅವರ ಅಧ್ಯಕ್ಷತೆಯಲ್ಲಿ ಇಂಥ ಒಂದು ಸಮಿತಿ ರಚನೆ ಮಾಡಿದರೆ ೩ ವಂತ್ತು ಳನೇ ದರ್ಜೆಯ ಅಧಿಕಾರಿಗಳಿಗೆ ತೊಂದರೆಯಾಗುವುದಿಲ್ಲ ಎಂದು ಈ ಎಂದು ಸಮಿತಿಯನ್ನು ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ —ಇವರ ಮಂತ್ರಿಮಂಡಲದಲ್ಲಿ ಶ್ರೀಮಾನ್ ಜಾಲಪ್ಪನವರು ಇದ್ದಾರೆ. ಶ್ರೀಮಾನ್ ಪಟೇಲ್‌ರವರು ಇದ್ದಾರೆ ಅವರ ಒಂದು ಅಧ್ಯಕ್ಷತೆಯಲ್ಲೇ ಸಮಿತಿ ಮಾಡಬಹುದಾಗಿತ್ತಲ್ಲಾ.

ಅಧ್ಯಕ್ಷರು.—ಈ ವಿಷಯವನ್ನು ಇಲ್ಲಿಗೇನೇ ಮುಕ್ತಾಯ ಮಾಡೋಣ. I have gone to the next subject: Honourable Member Sri Kantha may start his notice.

ಶ್ರೀ ಎಸ್. ಎ. ಕಾಂತ.—ಅಧ್ಯಕ್ಷರೆ, ಬಾಗಲ ಕೋಟೆಯ ಸಿಮೆಂಟ್ ಕಾರ್ಖಾನೆಯ ಕಾರ್ಮಿಕರು ಸರದಿ ಉಪವಾಸವನ್ನು ಮಾಡುತ್ತಿದ್ದಾರೆ. ಅವರ ಬಗ್ಗೆ ಇದುವರೆಗೆ ಯಾವರೀತಿಯಾದ ನಿರ್ಣಯವನ್ನೂ ತೆಗೆದುಕೊಂಡಿಲ್ಲ. ಆ ಕಾರ್ಮಿಕರ ಬೇಡಿಕೆಗಳು ಏನು ಇವೆ ಅದರ ಬಗ್ಗೆ ಏನಾದರೂ ಒಪ್ಪಂದ ಆಗಿದೆಯೇ ? ಆ ಪ್ರಕಾರವಾಗಿ ಅವರು ನಡೆದು ಕೊಂಡಿದ್ದಾರೆಯೇ ? ಈ ಬಗ್ಗೆ ಮಾನ್ಯ ಕಾರ್ಮಿಕ ಸಚಿವರು ಈಗಲಾದರೂ ಕೂಡ ಏನಾದರೂ ಉತ್ತರ ಹೇಳುವರೇ ?

ಶ್ರೀ ಅಜೀಜ್ ಸೇಟ್.—ಮಾನ್ಯ ಅಧ್ಯಕ್ಷರೇ,.....

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನಂ ಕೇಳಿದ ಪ್ರಶ್ನೆಗೆ ಉತ್ತರ ಬರಲಿಲ್ಲಾ.

ಅಧ್ಯಕ್ಷರು.—ಅವರು ಹೇಳಿದ್ದು ಸಮಂಜಸವಾದ ಉತ್ತರವಲ್ಲ. ಅವರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಡಾ. ರಾಜಕುಮಾರ್‌ರವರ ಇದರ ಬಗ್ಗೆ ಏನು ಹೇಳಿಕೆ ಕೊಟ್ಟಿದ್ದಾರೆ ಅದು ಪತ್ರಿಕೆಯಲ್ಲೂ ಸಹ ಬಂದಿದೆ. ನಾನು ಬೇರೆ ಹೇಳಬೇಕಾಗಿಲ್ಲ. ಅವರು ಇದನ್ನು ರಿಜೆಕ್ಟ್ ಮಾಡಿದ್ದೇವೆಂದು ಮಾಡಿದ್ದಾರಲ್ಲ.

ಶ್ರೀ ಪಿ. ರಾಂದೇವ್.—ಡಾ. ರಾಜಕುಮಾರ್‌ರವರಿಂದ ನಮಗೇನೂ ಉತ್ತರ ಬಂದಿಲ್ಲ. ಸರ್ಕಾರದವರು ಮಾಡಿರುವ ಒಂದು ಸಮಿತಿಗೆ ಅವರು ಅಧ್ಯಕ್ಷರಾಗುವುದಕ್ಕೆ ಒಪ್ಪಿಕೊಳ್ಳಬೇಕು ಎಂದು ನಾವು ಹೇಳುತ್ತೇವೆ. ನೀವೂ ಸಹ ಅವರನ್ನು ಒಪ್ಪಿಸುವುದಕ್ಕೆ ಏತಕ್ಕೆ ಪ್ರಯತ್ನವನ್ನು ಮಾಡಬಾರದು ?

ಶ್ರೀ ಎಸ್. ಬಂಗಾರಪ್ಪ.—ನಾನು ಕೇಳುತ್ತೇನೆ ಸರ್ಕಾರವೇ ಈ ೩ ವಂತ್ತು ಳನೇ ದರ್ಜೆಯವರಿಗೆ ಕನ್ನಡ ಕಡ್ಡಾಯ ಆಗುವ ಹಾಗೆ ಏತಕ್ಕೆ ಒಂದು ಸರ್ಕಾರೀ ಆಜ್ಞೆಯನ್ನು ಹೊರಡಿಸಬಾರದು ? ಈ ಬಗ್ಗೆ ಉತ್ತರ ಹೇಳುವುದಕ್ಕೆ ಸರ್ಕಾರವನ್ನು ಮಾನ್ಯ ಅಧ್ಯಕ್ಷರು ಏತಕ್ಕೆ ಒತ್ತಾಯ ಮಾಡಬಾರದು ?

ಅಧ್ಯಕ್ಷರು.—ಆ ಬಗ್ಗೆ ಉತ್ತರ ಹೇಳುವಂತೆ ಸರ್ಕಾರವನ್ನು ನಾನು ಒತ್ತಾಯ ಮಾಡುವುದಕ್ಕಾಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಮಂತ್ರಿ ಮಂಡಲದಲ್ಲಿರತಕ್ಕಂಥಾವರು ಯಾರು ಉತ್ತರ ಹೇಳಿದರೂ ಅದು ಜಂಟೀ ಜವಾಬ್ದಾರಿಯಿಂದಲೇ ಉತ್ತರ ಹೇಳುತ್ತಾರೆ, ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದಿಂದ ಇನ್ನೂ ಸರಿಯಾದ ಉತ್ತರ ಬಂದಿಲ್ಲ. ತಾವೇಕೆ ಅವರಿಂದ ಉತ್ತರವನ್ನು ಕೊಡಿಸುವುದಕ್ಕೆ ಒತ್ತಾಯ ಮಾಡಬಾರದು ?

ಅಧ್ಯಕ್ಷರು.—ನಿಯಮ ೩೩ರ ಪ್ರಕಾರ ಸರ್ಕಾರದಿಂದ ಉತ್ತರ ಹೇಳಲೇ ಬೇಕು ಎಂದು ನಾನು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಏನು ಉತ್ತರ ಹೇಳಿದ್ದಾರೆ, ಅದು ನಿಮಗೆ ತೃಪ್ತಿಯಾಗದೇ ಹೋದರೆ ಅದಕ್ಕೆ ನಾನೇನೂ ಮಾಡುವುದಕ್ಕಾಗುವುದಿಲ್ಲ. I am not' concerned. I don't want to go into details. ಕಾನೂನಿನ ವ್ಯಾಪ್ತಿಯಲ್ಲಿ ಸರ್ಕಾರದವರಿಂದ ಉತ್ತರ ಹೇಳುವ ಹಾಗೆ ಒತ್ತಾಯ ಮಾಡುವುದಕ್ಕೆ ಇದರಲ್ಲಿ ಅವಕಾಶವಿಲ್ಲ,

ಶ್ರೀ ಎಸ್. ಬಂಗಾರಪ್ಪ.—ನಾವು ನಿಯಮ ೩೫ರ ಪ್ರಕಾರ ಈ ವಿಷಯವನ್ನು ಪ್ರಸ್ತಾಪ ಮಾಡಿ ಸರಿಯಾಗಿ ಉತ್ತರವನ್ನು ಪಡೆಯಬೇಕೆನ್ನುವ ದೃಷ್ಟಿಯಿಂದ ನಾವು ಇಲ್ಲಿಗೆ ಬಂದಿದ್ದೇವೆ. ಹಾಗೆಯೇ ಮನೆಗೆ ಹೋಗುವುದಕ್ಕೆ ಬಂದಿಲ್ಲ.

ಅಧ್ಯಕ್ಷರು.—ಕಾನೂನಿನ ನಿಯಮಗಳ ವ್ಯಾಪ್ತಿಯನ್ನು ಬಿಟ್ಟು ಉತ್ತರ ಹೇಳಿ ಎಂದು ಅವರನ್ನು ಒತ್ತಾಯ ಪಡಿಸುವುದಕ್ಕೆ ನನಗೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಅವರಿಂದ ಸರಿಯಾಗಿ ಉತ್ತರ ಬರುವವರೆಗೂ, ಅವರು ಸರಿಯಾಗಿ ಉತ್ತರ ಕೊಡುವವರೆಗೂ ನಾವು ಬಿಡುವುದಿಲ್ಲ.

ಅಧ್ಯಕ್ಷರು.—ಅದು ನಿಮಗೆ ಬಿಟ್ಟ ವಿಷಯ.

ಶ್ರೀ ಎಸ್. ಬಂಗಾರಪ್ಪ.—ಅವರು ಉತ್ತರ ಕೊಡದೇ ಹೋದರೆ, ಅವರಿಂದ ಉತ್ತರವನ್ನು ಹೇಗೆ ತೆಗೆದುಕೊಳ್ಳಬೇಕು ಎನ್ನುವುದು ನನಗೆ ಗೊತ್ತಿದೆ. ನಮ್ಮ ಹಕ್ಕನ್ನು ನಾವು ಚಲಾವಣೆ ಮಾಡಬೇಕಾಗಿ ಬರುತ್ತದೆ.

ಅಧ್ಯಕ್ಷರು.—ನಿಮ್ಮ ಹಕ್ಕನ್ನು ನೀವು ಚಲಾವಣೆ ಮಾಡಿಕೊಳ್ಳುವುದಕ್ಕೆ ಹೋದರೆ ನಮ್ಮ ಹಕ್ಕನ್ನು ನಾವು ಚಲಾವಣೆ ಮಾಡಬೇಕಾಗುತ್ತದೆ. ತಾವು ಎಷ್ಟೇ ಧ್ವನಿ ಏರಿಸಿದರೂ ಅದು ರೂಲ್ ೩೫ರ ನಿಯಮದ ಪ್ರಕಾರ ಆ ವ್ಯಾಪ್ತಿಯಲ್ಲಿ ಬರುವುದಿಲ್ಲ. You cannot threaten the Government and also I cannot force the Government to give reply.

SRI S. BANGARAPPA.—We will force the Government.

(ಗೊಂದಲ)

MR. SPEAKER.—Nothing should go on record.

SRI RAMAKRISHNA HEGDE.—No body con threaten the Government. ತಪ್ಪಾಗಿ ೩೫ರ ಒಟು ಬಂದದ್ದು ನೆನಪು ಇರಲಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ತಮ್ಮಿಂದ ಹೇಗೆ ಉತ್ತರ ಪಡೆಯಬೇಕು ಅನ್ನುವುದು ನನಗೆ ಗೊತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ರೀತಿ ಹೆದರಿಸಿ ಉತ್ತರ ಪಡೆಯಬೇಕು ಎಂದರೆ ಆಗುವುದಿಲ್ಲ.

(ಗೊಂದಲ)

(ಕ್ರಾಂತಿ ರಂಗದ ಶ್ರೀ ಶಿವಮೂರ್ತಿ, ಶ್ರೀ ಕಾನಡೆ, ಶ್ರೀ ಸ್ವಾವಿಕಿರಾವ್ ಧರಣಿಗೆ ಕೂತರು ಮತ್ತು ಶ್ರೀ ಎಂ. ರಾಮಪ್ಪ ಇವರು ಡಯಾಸ್ ಒಳಗೆ ಬಂದು ನಿಂತರು)

SRI RAMAKRISHNA HEGDE.—No body can threaten the Government

(INTERRUPTION)

MR. SPEAKER.—Order please.

ಅಧ್ಯಕ್ಷರು.—ನಾನು ಸರ್ಕಾರವನ್ನು ಒತ್ತಾಯ ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಈ ಮಾತನ್ನು ಆ ಕಡೆಗೂ ಹೇಳಬೇಕು.

ಅಧ್ಯಕ್ಷರು.—ನಾನು ಒತ್ತಾಯ ಮಾಡುವುದಕ್ಕಾಗುವುದಿಲ್ಲ.

ಎಸ್. ಬಂಗಾರಪ್ಪ.—ಅದನ್ನು ಒಪ್ಪುವುದಕ್ಕೆ ನಮಗೂ ಸಾಧ್ಯವಿಲ್ಲವೆಂದು ನಾನು ಸಹ ಸ್ಪಷ್ಟವಾಗಿ ಹೇಳುತ್ತಿದ್ದೇನೆ.

MR. SPEAKER.—I cannot allow this to go in this House.

ಶ್ರೀ ಬಿ. ಮೈಕೇಲ್. ಫರ್ನಾಂಡೀಸ್.—ಪಕ್ಷದ ಮುಖಂಡರು ಸೀಟಿನಲ್ಲಿ ಕುಳಿತುಕೊಂಡಿದ್ದಾರೆ, ಅವರ ಸ್ನೇಹಿತರು ಮಾತ್ರ ಡಯಾಸ್ ಮೇಲೆ ಬಂದಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರಾದ ಬಂಗಾರಪ್ಪನವರು ರೂಲ್ ೩೫೪ರ ಪ್ರಕಾರ.....ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರು, ಸಭೆಯನ್ನು ಆಡರ್‌ನಲ್ಲಿ ತೆಗೆದುಕೊಂಡು ನಂತರ ಕಾರ್ಯಕಲಾಪಗಳನ್ನು ನಡೆಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರಾದ ಬಂಗಾರಪ್ಪನವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸದನದ ಒಳಗಡೆ ನಾವೇನೋ ಕುಳಿತುಕೊಂಡು ಕೆಲಸ ಮಾಡುತ್ತಿದ್ದೇವೆ, ಆದರೆ ಹೊರಗಡೆ 'ಬೆಂಗಳೂರು ಬಂದ್' ಆಗಿ ಯಾವ ರೀತಿಯಲ್ಲಿ ಜನ ಸಾಮಾನ್ಯರಿಗೆ ತೊಂದರೆಯಾಗಿದೆ ಎಂದು ನಾವು ವಿಚಾರ ಮಾಡಬೇಕಾಗಿದೆ. ಹೊರಗಡೆ ಒಂದು ರೀತಿಯ ಅವ್ಯವಸ್ಥೆ ಇದೆ, ಇದನ್ನು ನಾವು ಯೋಚನೆ ಮಾಡಬೇಕಾಗಿದೆ. ಆದ್ದರಿಂದ ನಾವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಷಯಕ್ಕೆ ಗಮನ ಕೊಡಬೇಕಾದ್ದು ಪ್ರಾಮುಖ್ಯವಾಗಿದೆ.

ಅಧ್ಯಕ್ಷರು.—ನಾನು ಸರ್ಕಾರವನ್ನು ಈ ರೀತಿಯಾಗಿಯೇ ಮಾಡಿ ಎಂದು ಒತ್ತಾಯ ಮಾಡಲಾರೆ ರೂಲ್ ೩೫೪ರ ಪ್ರಕಾರ, ಇದರ ವ್ಯಾಪ್ತಿ ಬಹಳ ಸೀಮಿತವಾಗಿದೆ. ಸರ್ಕಾರದವರು ಇದರ ಮೇಲೆ ಉತ್ತರ ಕೊಡಬಹುದು, ಕೊಡದೇ ಇರಬಹುದು. ಮಾನ್ಯ ಮಂತ್ರಿಗಳು ಇದರ ಬಗ್ಗೆ ಆಗಲೇ ಉತ್ತರ ಕೊಟ್ಟಿದ್ದಾರೆ. ಅದ್ದರಿಂದಲೇ ತಾವು ಸಮಾಧಾನ ಪಟ್ಟುಕೊಳ್ಳಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಹೊರಗಡೆ 'ಬೆಂಗಳೂರು ಬಂದ್' ಆಗಿ ಬೆಂಕಿ ಹತ್ತಿಕೊಂಡು ಉರಿಯುತ್ತಿರುವಾಗ ಸನ್ಮಾನ್ಯ ಮುಖ್ಯಮಂತ್ರಿಗಳು 'ರೋಂ ನ ಹಿರೋ' ತರಹ ಇಲ್ಲಿ ಕುಳಿತುಕೊಂಡಿದ್ದಾರೆ. ಈ ಸದನದಲ್ಲಿ ಕಾರ್ಯಕಲಾಪಗಳು ನಡೆಯಬೇಕು, ಕಾರ್ಯಕಲಾಪಗಳನ್ನು ನಡೆಸ ತಕ್ಕದಕ್ಕೆ ನಾವು ಸಹಾಯ ಮಾಡಬೇಕು, ನಮ್ಮ ಸಹಕಾರವನ್ನು ಕೊಡಬೇಕು, ನಿಜ ಮತ್ತು ಅನೇಕ ಬಿಲ್‌ಗಳು ಸಭೆಯಲ್ಲಿ ಪಾಸ್ ಆಗಬೇಕಾಗಿದೆ, ಆದರೆ ಇವತ್ತು ಬಾಗಲಕೋಟೆಯಲ್ಲಿ ಜನ ಸಾಯುತ್ತಿದ್ದಾರೆ. ಇದಕ್ಕೂ ಸಹ ಟ್ರಜರಿ ಬೆಂಚಿನವರು ಇಲ್ಲಿ ಪ್ರಚೋದನೆ ಕೊಡತಕ್ಕದ್ದು ಸರಿಯಲ್ಲ. ಅವರಿಗೆ ಸ್ವಲ್ಪ ಸಹನೆ ಇರಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ನಿಮ್ಮ ಉದ್ದೇಶವೇ ಬೇರೆ ಇದೆ. ಶಾಂತಿಯಿಂದ ಸಭೆಯನ್ನು ನಡೆಸುವುದಕ್ಕೆ ತಮಗೆ ಇಷ್ಟವಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮಂತ್ರಿಗಳು ಈ ರೀತಿಯಾಗಿ ಎದ್ದು ನಿಂತರೆ ನಾನು ಏನನ್ನು ಹೇಳಬೇಕು? ನಾನು ಹೇಳುವ ವಿಷಯವಾದರೂ ಇಷ್ಟೆ, ಆಡಳಿತ ಪಕ್ಷದವರಿಗೆ ನಿಜವಾಗಿಯೂ ಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕು ಎನ್ನುವ ಸತನೆ ಇರಬೇಕು. ಸನ್ಮಾನ್ಯ ಮಂತ್ರಿಗಳು ಕನ್ನಡದ ಬಗ್ಗೆ ಮತ್ತು 'ಬೆಂಗಳೂರು ಬಂದ್' ಬಗ್ಗೆ ಎರಡು ಮಾತುಗಳನ್ನು ಹೇಳದೆ ಇರುವುದರಿಂದ ಇದೆಲ್ಲಾ ಆಗಿದೆ, ಅವರು ಎರಡು ಮಾತುಗಳನ್ನು ಹೇಳಿದರೆ ಈ ವಿವಾದವೇ ಇರುತ್ತಿರಲಿಲ್ಲ. ಇಂಥ ವಿಷಯಂಗಳಲ್ಲಿ ಸರ್ಕಾರದವರು ತಪ್ಪು ಮಾಡಿದರೆಂದು ಹೇಳುವುದಕ್ಕೆ ಅವಕಾಶವನ್ನು ಕೊಡದೆ ತಪ್ಪು ಇದ್ದರೆ ಅದನ್ನು ಸರಿ ಮಾಡತಕ್ಕದ್ದರ ಕಡೆಗೆ ಅವರ ಗಮನವನ್ನೂ ಸಹ ಕೊಡುತ್ತಿಲ್ಲ. ನಮ್ಮ ಒತ್ತಾಯವೂ ಕೂಡ ಅವರ ಗಮನವನ್ನು ಸೆಳೆಯುವುದರ ಕಡೆಗೆ ಇದೆ. ನಾನಾ ರೀತಿಯ ಸಂವಿಧಾನಾತ್ಮಕ ಕ್ರಮಗಳನ್ನು ನಾವು ಎತ್ತಿ, ಈ ದಿಸೆಯಲ್ಲಿ ಹೇಳಬೇಕಾಗಿದೆ. ಇದಕ್ಕೆ ಸರ್ಕಾರದವರು ತಿಳುವಳಿಕೆಯಿಂದ ಉತ್ತರ ಕೊಟ್ಟು ಸರಿಯಾದ ಪರಿಹಾರ ಮಾಡಬೇಕು.

ಅಧ್ಯಕ್ಷರು.—ನೀವೇ ಹಾಕಿಕೊಟ್ಟಿರತಕ್ಕ ನಿಯಮಗಳ ಪ್ರಕಾರವೇ ನಾನು ನೋಟೀಸನ್ನು ತೆಗೆದು ಕೊಂಡು, ಕಾರ್ಯಕಲಾಪಗಳನ್ನು ನಡೆಸುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ರೀತಿಯಿರುವಾಗ, ಮಾನ್ಯ ಮುಖ್ಯಮಂತ್ರಿಗಳು ಅತ್ಯಂತ ಸಹನೆಯಿಂದ ಇರಬೇಕು. ಕರ್ನಾಟಕ ರಾಜ್ಯದ ೪೦ರಾ ಕೋಟಿ ಜನತೆಗೆ ಸಂಬಂಧಪಟ್ಟ ವಿಷಯದಲ್ಲಿ ಮಾನ್ಯಮಂತ್ರಿಗಳು ತಕ್ಷಣ ಎದ್ದು ನಿಂತು ಕೋಪ ಮಾಡಿಕೊಂಡರೆ ನಮ್ಮ ಗತಿ ಏನು? ಸಭಾ

ನಾಯಕರು ಇಡೀ ಸದನವನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕಲಾಪಗಳನ್ನು ಹಡೆಸಿ ಕೊಳ್ಳತಕ್ಕ ವ್ಯವಹಾರವನ್ನು ಏಕಪಕ್ಷೀಯ ದೃಷ್ಟಿಯಿಂದ ಮಾಡಬೇಕಾಗಿದೆ. ಇದು ಬಿಟ್ಟು ಇವರು ಒಂದು ರೀತಿಯ ವ್ಯವಹಾರ ಮಾಡುವುದಕ್ಕೆ ಹೊರಟರೆ ಹೇಗೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಸದನದಲ್ಲಿ ಗಂಭೀರವಾದ ವಿಚಾರದ ಬಗ್ಗೆ ಚರ್ಚೆಯಾಗುತ್ತಿದೆ. ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಅಧ್ಯಕ್ಷರು ತಮ್ಮ ಆದೇಶವನ್ನು ಕೊಟ್ಟರೂ ಸಹ ಅದನ್ನು ಇವರಂಗಳು ಪಾಲನೆ ಮಾಡಲಿಲ್ಲ. ಈ ರೀತಿಯಾಗಿ ಹಳೆಯ ಸದಸ್ಯರುಗಳು ನಡೆದುಕೊಂಡರೆ ಹೊಸದಾಗಿ ಬಂದ ಸದಸ್ಯರುಗಳು ಯಾವ ರೀತಿಯಲ್ಲಿ ಕೆಲಸ ಮಾಡಬೇಕೋ ನನಗೆ ಅರ್ಥವಾಗುತ್ತಿಲ್ಲ. ಅನಾವಶ್ಯಕವಾಗಿ ಡಾ. ರಾಜ್‌ಕುಮಾರ್ ಅವರ ಹೆಸರನ್ನು ಇಲ್ಲಿ ತರುತ್ತಿದ್ದಾರೆ. ರಾಜ್ಯದಲ್ಲಿ ಕನ್ನಡ ಇರಬೇಕಂ, ಅದು ನಾವೆಲ್ಲರೂ ಕೇಳತಕ್ಕ ಹಕ್ಕು. ಈ ಸಂದರ್ಭದಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರು ಮಾತನಾಡುವಾಗ 'ಬೆಂಗಳೂರಿನಲ್ಲಿ ಬೆಂಕಿ ಹತ್ತಿಕೊಂಡು ಉರಿಯುತ್ತಿದೆ' ಎನ್ನುವ ಮಾತನ್ನು ಹೇಳುತ್ತಿದ್ದಾರೆ.

(ಗೊಂದಲ)

ಡಾ. ಬಿ. ಎಸ್. ಆಚಾರ್ಯ.—ಕರ್ನಾಟಕ ರಾಜ್ಯದಲ್ಲಿ 'ಟೇಪ್' ನ ಪ್ರಕರಣ ನಡೆದು ವಿರೋಧ ಪಕ್ಷದ ನಾಯಕರ ಕುರ್ಚಿಗೆ ಬೆಂಕಿ ಹತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮ್ಮ ಆಸೆಯಾದರೂ ಇದಕ್ಕೆ ಏನಾದರೂ ಪರಿಹಾರವನ್ನು ಕಂಡು ಹಿಡಿದು ಚಳುವಳಿಯನ್ನು ತಡೆಗಟ್ಟಬೇಕು. ಎಂದು ಇತ್ತು. ಆದರೆ ಇವರು ಇದೇ ನೆವವನ್ನು ಮಾಡಿಕೊಂಡು ಬೆಂಗಳೂರನ್ನು ಉರಿಸಂವ ಆಸೆಯನ್ನು ಇಟ್ಟುಕೊಂಡಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ (ಐ) ನೀತಿಯಿಂದ ಬೆಂಕಿ ಹತ್ತಿಕೊಂಡು ಉರಿಯುತ್ತಿದೆ ಎನ್ನುವುದನ್ನು ಮಾನ್ಯ ವಿರೋಧಪಕ್ಷದ ನಾಯಕರು ಜೆನ್ನಾಗಿ ಅರ್ಥ ಮಾಡಿಕೊಳ್ಳಬೇಕು.

ವಿ ಪಿ. ಎಂ.

ಅಧ್ಯಕ್ಷರು.—ನಿಯಮ ೩೩೪ರ ವಿಷಯ ಈಗಾಗಲೇ ಬಹಳ ದೂರಕ್ಕೆ ಹೋಗಿದೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಸ್ವಾಮಿ, ದಿವಂಗತ ದೇವರಾಜ ಅರಸುರವರು ಅಲ್ಪ ಸಂಖ್ಯಾತರ ವಿಷಯವಾಗಿ ಹಾಗೂ ಹಿಂದುಳಿದ ವರ್ಗಗಳ ವಿಳಿಗೆಯ ದೃಷ್ಟಿಯಿಂದ ಕ್ರಾಂತಿರಂಗ ಪಕ್ಷವನ್ನು ಕಟ್ಟಿದರು. ಮಾನ್ಯ ಮೊಯ್ಲಿಯವರು ಇದನ್ನು ರಾಜಕೀಯಕ್ಕಾಗಿ ಎಳೆದುಕೊಂಡು ಬಂದು ಅನೇಕ ರೀತಿಯ ಪ್ರಕಟಣೆಗಳ ಮೂಲಕ ಹಾಗೂ ಬಾಷಣಗಳ ಮೂಲಕಹೇಳುತ್ತಿದ್ದಾರೆ. ಇವತ್ತು ಭಾಷೆಯು ವಿಚಾರದಲ್ಲಿಕನ್ನಡ ಯಾರಿಗೂ ದುರಭಿಮಾನ ಇಲ್ಲ. ಅಭಿಮಾನ ಎಲ್ಲರಿಗೂ ಇದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ.....

SRI MICHAEL B FERNANDES.—I want to complete my speech. Why the Hon-Member disturbing me. I have not yielded.

SRI M. VEERAPPA MOILY.—I have just brought some facts.....

ಶ್ರೀ ಮೈಕೇಲ್ ಫರ್ನಾಂಡೀಸ್.—ಇವತ್ತು ರಾಜ್ಯದಲ್ಲಿ ಅಲ್ಪಸಂಖ್ಯಾತರು ಎಷ್ಟು ಜನರಿದ್ದಾರೆ? ೩ ಮತ್ತು ೪ವೇ ದರ್ಜೆ ನೌಕರರು ಉದ್ಯೋಗಕ್ಕೆ ಸೇರುವ ಮೊದಲು ಕನ್ನಡ ಭಾಷೆಯಲ್ಲಿ ಪಾಸಾಗಿದ್ದಾರೆಯೆ, ಇಲ್ಲವೆ, ಎನ್ನುವ ವಿಷಯ ನನಗೆ ಸರಿಯಾಗಿ ಗೊತ್ತಿಲ್ಲ. ಇವತ್ತು ಇವರು ದೇವರಾಜ ಅರಸುರವರು ಅಲ್ಪಸಂಖ್ಯಾತರಿಗೋಸ್ಕರ ಹಾಕಿಕೊಂಡಿದ್ದ ತತ್ವಗಳನ್ನು ಅನುಸರಿಸಿಕೊಂಡು ಬರುತ್ತೇವೆಂದು ಹೇಳುತ್ತಾರೆ. ಶ್ರೀಮತಿ ಇಂದಿರಾಗಾಂಧಿಯವರ ಪಕ್ಷದವರಾದ ಇವರ ನಿಲುವೆ ಏನು ? ಈ ವಿಚಾರದಲಿ ಇವರ ಅಭಿಪ್ರಾಯ ಏನು ? ಬಣ್ಣ ಏನು ? ಎನ್ನುವುದನ್ನು ತಿಳಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ನನ್ನ ಕ್ರಿಯಾಲೋಪ ಇಷ್ಟೇ. ಇವರು ಪದೇ ಪದೇ ಏತಕ್ಕೆ ನಮ್ಮ ಪಕ್ಷದ ಹೆಸರು ಹೇಳುತ್ತಾರೆ. ತಾವು ೩೩೪ರ ನಿಯಮದ ಮೇರೆಗೆ ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದೀರಿ. ಅದಕ್ಕೆ ಸೀಮಿತವಾಗಿಯೇ ಮಾತನಾಡಲಿ

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ನಿಮ್ಮ ಪಕ್ಷದ ಹೆಸರೇ ಶ್ರೀಮತಿ ಇಂದಿರಾಗಾಂಧಿ ಪಕ್ಷ.....

(ಗೊಂದಲ)

ಅಧ್ಯಕ್ಷರು.—Don't record. ಯಾವುದೂ ದಾಖಲೆಯಲ್ಲಿ ಹೋಗುವುದಿಲ್ಲ.

(ಗೊಂದಲ)

SRI GOVINDA P. VODEYARAJ.—Why the hon. Member Fernandes should bring the name of the Prime Minister.

SRI MICHAEL B. FERNANDES.—It is the name of your party.

(ಗೊಂದಲ)

ಅಧ್ಯಕ್ಷರು.—ಯಾವುದೂ ದಾಖಲೆಗೆ ಹೋಗುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ಈ ಸಭೆಯಲ್ಲಿ ಎದ್ದು ಏನಾದರೂ ಹೇಳುವುದಕ್ಕೆ ನಮಗೆ ಅಧಿಕಾರ ಇಲ್ಲವೆ ?

(ಗೊಂದಲ)

ಅಧ್ಯಕ್ಷರು.—ರಾಮಪ್ಪನವರೇ, ತಮ್ಮ ಜಾಗಕ್ಕೆ ಹೋಗಿ ಕೂತುಕೊಳ್ಳಿ. ತಮ್ಮಪ್ಪಕ್ಕೆ ತಾವೇ ಚರ್ಚೆ ಮಾಡುವುದಾದರೆ ಹೇಗೆ ?

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ, ರಾಮಪ್ಪನವರು ಆರಾಮವಾಗಿ ವಾಕ್ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಇದು ಓಡಾಡತಕ್ಕ ಜಾಗವಲ್ಲ. ಶ್ರೀಮಾನ್ ರಾಮಪ್ಪನವರು ಎತ್ತಿರತಕ್ಕ ವಿಷಯದ ಬಗ್ಗೆ ನಿಯಮದ ವ್ಯಾಪ್ತಿಯಲ್ಲಿ ಸರ್ಕಾರವನ್ನು ಒತ್ತಾಯಿಸುವುದಕ್ಕೆ ಅವಕಾಶ ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ತಮ್ಮ ಅಪ್ಪಣೆ ಪಡೆದು ವಿಚಾರ ಕೇಳಿದರೆ ಅವರು ಏತಕ್ಕೆ ಕೂಗಾಡಬೇಕು. ನಮಗೆ ಕೂಗಾಡುವುದಕ್ಕೆ ಬರುವುದಿಲ್ಲವೇನು ? ಹೀಗಾದರೆ ನಾವು ಕೂಡ ರಾಮಪ್ಪನವರ ಹಾಗೆ ಓಡಾಡಲೇಬೇಕಾಗುತ್ತದೆ.

ಅಧ್ಯಕ್ಷರು.—ನಾನಾ ವಿಷಯವನ್ನು ಗಾಣ ಮಾಡಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಈ ರೀತಿ ಸಭೆ ಯಾವಾಗಲೂ ನಡೆದಿರಲಿಲ್ಲ.

ಅಧ್ಯಕ್ಷರು.—ನಿಮಿಳನೇ ನಿಯಮದ ವ್ಯಾಪ್ತಿ ಏನೇರಿ ಹೋಗುವುದಕ್ಕೆ ಸಾಧ್ಯವಿಲ್ಲ ಸರ್ಕಾರಕ್ಕೆ ಇಂಥಾದಕ್ಕೆಲ್ಲಾ ಸಮಾಧಾನದ ಉತ್ತರ ಕೊಡಬೇಕೆಂದು ಹೇಳುವುದಕ್ಕೆ ಬರುವುದಿಲ್ಲ. ಆದುದರಿಂದ ಮುಂದಿನ ವಿಚಾರವನ್ನು ತೆಗೆದುಕೊಳ್ಳೋಣ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಫರ್ನಾಂಡೀಸ್‌ರವರು ಇಲ್ಲಿ ಸಂಬಂಧಪಡದೇ ಇರತಕ್ಕ ವಿಚಾರವನ್ನು ತಂದು ಶ್ರೀಮತಿ ಇಂದಿರಾಗಾಂಧಿಯವರ ಹೆಸರನ್ನು ಎತಕ್ಕೆ ಹೇಳಬೇಕು ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಬಂಗಾರಪ್ಪನವರೂ ಮುಖ್ಯಮಂತ್ರಿಯವರ ಪರವಾಗಿ ಹೇಳಿದ್ದು ಸರಿಯಾಗಿದೆಯೇ ?

ಶ್ರೀ ಕೆ. ಹೆಚ್. ರಂಗನಾಥ್.—ಸಂಬಂಧಪಡದೇ ಇರತಕ್ಕ ವಿಷಯವನ್ನು ಪ್ರತಿ ನಿಮಿಷಕ್ಕೂ ಪ್ರಸ್ತಾಪ ಮಾಡಿದರೆ, ನಾವು ಹೇಗೆ ಕೂತುಕೊಳ್ಳಬೇಕು. ಹೆದರಿಸಿ ಬಿಟ್ಟರೆ ಹೆದರುತ್ತೇವೆಯೇ ? ಮಾತಿಗೂ ಸ್ವಲ್ಪ ಸಹನೆ ಇರಬೇಕಪ್ಪ.

ಅಧ್ಯಕ್ಷರು.—ನಾನು ಈಗ ಮಾನ್ಯ ಮಂತ್ರಿಗಳನ್ನು ಹೇಳಿಕೆ ಕೊಡುವ ಶಲಂವಾಗಿ ಕರೆದಿದ್ದೇನೆ.

ಶ್ರೀ ಎಸ್.—ಬಂಗಾರಪ್ಪ.—ಹಿಂದೆ ಕೂಡ ಈ ವಿಷಯ ಚರ್ಚೆಯಾಗಿದೆ.

ಅಧ್ಯಕ್ಷರು.—ನಾವಾಗಲೇ ಮಂತ್ರಿಗಳನ್ನು ಕರೆದಿದ್ದೇನೆ.

ಶ್ರೀ ಎಸ್,ಬಂಗಾರಪ್ಪ,—ದಯವಿಟ್ಟು ಕ್ಷಮಿಸಿ,

ಅಧ್ಯಕ್ಷರು.—ಪ್ರಶ್ನೆಗೆ ಉತ್ತರವನ್ನು ಮಾನ್ಯ ಮಂತ್ರಿಗಳವರು ಹೇಳುತ್ತಿದ್ದಾರೆ. ವೆಲ್‌ನಲ್ಲಿ ಕೂತಿದ್ದರೂ ಸಹ ಅನೇಕ ಸಾರಿ ಸಭೆ ನಡೆದಿರುವುದು ಇದೆ, ಅದರ ಬಗ್ಗೆ ರೂಲಿಂಗ್‌ಗಳೂ ಸಹ ಇದೆ.

SRI G. MADE GOWDA.—The house is not in order.

MR SPEAKER.—There are umpteem number of rulings to the effect that even though members are inside the well, the House is in order. The Hon'ble Minister for Labour to continue his reply.

SRI AZEEZ SAIT—Sir, the President of B.C.C. Workers Union and BCC Staff Union gave a charter of demands...

SRI G. MADE GOWDA—I am on apoint of order.

SRI AZEEZ SAIT—You are a Senior MLA and an Ex-Minister. Why are you crying like MR Bangarappa ? You are an elderly person, Please sit down, I know you better and you know me better,

ಶ್ರೀ ಜಿ. ಮಾದೇಗೌಡ.—ಮಾನ್ಯ ಬಂಗಾರಪ್ಪನವರು ಬಹಳ ಪ್ರಾಮುಖ್ಯವಾದ ವಿಷಯಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ೩೪ಳಿಕರ ನಿಯಮಗಳ ಪ್ರಕಾರ ಕೆಲವಕ್ಕೆ ಮಂತ್ರಿಗಳು ಉತ್ತರ ಹೇಳಬಹುದು, ಕೆಲವಕ್ಕೆ ಉತ್ತರ ಹೇಳುವುದಿಲ್ಲ. ಆದರೆ ಮಂತ್ರಿಗಳವರು ಉತ್ತರ ಕೊಡಬಾರದೆಂದಂ ಎಲ್ಲಿದೆ ? ಆದುದರಿಂದ ಇದು ಬಹಳ ಪ್ರಾಮುಖ್ಯವಾಗಿರುವುದರಿಂದ ಇದನ್ನು ಒತ್ತಾಯ ಮಾಡುತ್ತಿದ್ದೇವೆ.

ಅಧ್ಯಕ್ಷರು.—ವೆಲ್‌ನಲ್ಲಿರುವಾಗ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಅಧ್ಯಕ್ಷರೇ ತಮಗೂ ಗೊತ್ತಿದೆ, ಈ ಸದನದ ಹೊರಗಡೆ ಭಾಷೆಯ ವಿಚಾರದಲ್ಲಿ ಬಂದ್ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರ ಒಂದು ಸಮಿತಿಯನ್ನು ಕೂಡ ನೇಮಕ ಮಾಡಿದೆ. ಇದರ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆ ಕೂಡ ಆಗಿದೆ. ಈಗ ಬೆಂಗಳೂರು ಬಂದ್ ಆಗಿದೆ. ಇದರ ವಿಚಾರದಲ್ಲಿ ಅವರು ಪ್ರತಿಭಟನೆ ಮತವನ್ನು ತೆಗೆದುಕೊಳ್ಳುವುದಾದರೆ ಅದು ಬೇರೆ. ಆದರೆ ಮಾನ್ಯ ಮುಖ್ಯಮಂತ್ರಿಗಳವರು ಇಷ್ಟು ಹಠ ಹಿಡಿದುಕೊಂಡು ಕೂತುಕೊಂಡರೆ ಹೇಗೆ? ಕರ್ನಾಟಕ ರಾಜ್ಯದ ಭಾಷೆಯಾದ ಕನ್ನಡದ ಬಗ್ಗೆ ಪ್ರಶ್ನೆ ಉದ್ಭವವಾಗಿರುವಾಗ ಅದರ ಬಗ್ಗೆ ಸಮಂಜಸವಾದ ಉತ್ತರವನ್ನು ಅಥವಾ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರು ಮುಂದಕ್ಕೆ ಹೋಗದಿದ್ದರೆ ಸರ್ಕಾರದ ಕಾರ್ಯಕಲಾಪಗಳು ಹೇಗೆ ನಡೆಯಬೇಕು ? ಇದರಲ್ಲಿ ನಮ್ಮ ಪಕ್ಷದ ನಿಲುವು ಏನು ಎಂಬುದನ್ನು ಈಗ ನಾನು ಹೇಳುವುದಕ್ಕೆ ತಯಾರಾಗಿಲ್ಲ...

ಅಧ್ಯಕ್ಷರು.—ಮಾನ್ಯ ಮಂತ್ರಿಗಳವರಿಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವರನ್ನು ಕರೆದಿದ್ದೇನೆ. ಅದಕ್ಕೆ ಅವರು ಯಾರಿಗೆ ಬೇಕೋ ಅವರಿಗೆ ಉತ್ತರ ಕೊಡುತ್ತಾರೆ...

ಶ್ರೀ ಎಂ. ವೀರಪ್ಪಮೊಯ್ಲಿ.—ಬೇಕಾದರೆ ಉತ್ತರ ಕೊಡಬಹುದು, ಬೇಡದಿದ್ದರೆ ಬಿಡಬಹುದಂ, ಆದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ.

MR SPEAKER.—I cannot go back.

ಶ್ರೀ ಎಂ. ವೀರಪ್ಪಮೊಯ್ಲಿ.—ಜ್ವಲಂತ ಪ್ರಶ್ನೆ ಈ ಸದನದ ಮುಂದಿರುವಾಗ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳವರು ಇದರ ಬಗ್ಗೆ ಸಂಪೂರ್ಣವಾಗಿ ಉದಾಸೀನ ಮಾಡಿ ಸದನದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಇವತ್ತು ಇದರ ಬಗ್ಗೆ ತಮ್ಮ ನಿಲುವು ಏನೆಂಬುದನ್ನು ಸ್ಪಷ್ಟನೆ ಮಾಡಿಲ್ಲ ಮತ್ತು ಸಮಾಧಾನ ಮಾಡಿಲ್ಲ...

MR SPEAKER.—I am not concerned about it.

SRI M. VEERAPPA MOILY—We are also not concerned about it.

MR SPEAKER,—Don't record.

ಶ್ರೀ ಎಸ್. ಬಂಗಾರಪ್ಪ.—ತಾವು ರಿಕಾರ್ಡ್ ಮಾಡಬಾರದೆಂದು ಹೇಳಿರುವುದರಿಂದ ವಿರೋಧ ಪಕ್ಷದ ನಾಯಕರವರು ಮಾತನಾಡಿದ್ದು ಹೋಗಲಿಲ್ಲ...

MR. SPEAKER.—I have not called the Hon'ble Leader of the opposition to speak.

ಶ್ರೀ ಕೆ. ಹೆಚ್. ರಂಗನಾಥ್.—ದಯವಿಟ್ಟು ೫ ನಿಮಿಷ ಅಡ್ಜರ್ನ್ ಮಾಡಿ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ತಮ್ಮ ಸೀಟುಗಳಿಗೆ ಹೋಗಿ ಎಂದು ಕೇಳಿಕೊಳ್ಳುತ್ತೇನೆ. ಒಟ್ಟಿಗೆ ೫-೬ ಜನ ಎದ್ದುನಿಂತುಕೊಂಡು ಮಾತನಾಡುತ್ತಿದ್ದರೆ ಹೇಗೆ ?

ಶ್ರೀ ಭೀಮಣ್ಣ ಖಂಡ್ರೆ.—ಸರ್ಕಾರದವರು ಒಂದು ಕಮಿಟಿ ಮಾಡಿದ್ದೇವೆಂದು ಹೇಳಿದ್ದಾರೆ, ಮುಂದೆ ಏನು ಎನ್ನುವುದನ್ನು ಹೇಳುತ್ತಾರೆಯೇ ?

ಅಧ್ಯಕ್ಷರು.—ತಾವು ಈಗ ಬಂದಿದ್ದೀರಿ, ವಿಷಯ ತಮಗೆ ತಿಳಿದಿರಬೇಕು.

ಶ್ರೀ ಭೀಮಣ್ಣ ಖಂಡ್ರೆ.—ನಾನು ಮೊದಲಿಂದ ಇದ್ದೇನೆ.

ಅಧ್ಯಕ್ಷರು.—ನಿಯಮ ೫೫೪ರಲ್ಲಿ ಹೇಗೆ ಒತ್ತಾಯ ಮಾಡಲಿಕ್ಕೆ ಬರುತ್ತದೆ ಹೇಳಿ.

(ಗೊಂದಲ)

ಅಧ್ಯಕ್ಷರು.—ಕುಳಿತುಕೊಳ್ಳಿ

ಶ್ರೀ ಕೆ. ಹೆಚ್. ರಂಗನಾಥ್.—ನನ್ನ ಮನವಿ ಏನೆಂದರೆ, ಇಲ್ಲಿ ಹೀಗೆ ಕೂಗತಕ್ಕಂಥದ್ದಕ್ಕೆ ನಾವು ಅವಕಾಶ ಕೊಡತಕ್ಕದ್ದು ಸರಿಯಲ್ಲ. ಆದುದರಿಂದ ಸಭೆಯನ್ನು ೫ ನಿಮಿಷ ಅಡ್ಜರ್ನ್ ಮಾಡಿ ತದ ನಂತರ ಹೇರಿದರೆ ಒಳ್ಳೆಯದು.

ಅಧ್ಯಕ್ಷರು.—ಕಾರಣ ಇರಬೇಕಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಸಭಾನಾಯಕರ ಜೊತೆ ಮಾತನಾಡುತ್ತಾರೆ, ಅದಕ್ಕೆ ೫ ನಿಮಿಷ ಅಡ್ಜರ್ನ್ ಮಾಡಿ

ಶ್ರೀ ರಾಮಕೃಷ್ಣ ಹೆಗಡೆ.—ಕಲಂ ೫೫೪ರ ಪ್ರಕಾರ ಯಾವುದೇ ವಿಚಾರ ಎತ್ತಿದರೆ ನಾವು ಉತ್ತರ ಕೊಡಬೇಕು ಎಂದು ಹೇಳತಕ್ಕಂಥ ನಿರ್ಬಂಧ ಇಲ್ಲ. ನಮ್ಮ ಇಷ್ಟ

ಶ್ರೀ ಎಸ್. ಬಂಗಾರಪ್ಪ— ಹಾಗಾದರೆ ನಮ್ಮದೂ ಇಷ್ಟ

ಶ್ರೀ ರಾಮಕೃಷ್ಣ ಹೆಗಡೆ—ನೀವು ಕೇಳಿದ ಪ್ರಶ್ನೆಗಳಿಗೆಲ್ಲಾ...

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ—ಯಾವ ವಿಚಾರದಲ್ಲಿ ನಮ್ಮ ಹತ್ತಿರ ಮಾಹಿತಿ ಇರುತ್ತದೋ ಆ ವಿಚಾರದಲ್ಲಿ ನಾವು ಉತ್ತರ ಕೊಡಬಹುದು

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ—೫೫೪ನೇ ನಿಯಮದ ಪ್ರಕಾರ ಸರ್ಕಾರದ ಮೇಲೆ ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ, ಬೇಕಾದರೆ ಅಡ್ಜರ್ನ್‌ಮೆಂಟ್ ಮೋಷನ್ ತರಿಸಿ ಅಥವಾ ಕಾಲಿಂಗ್ ಅಟೆನ್‌ಷನ್ ತರಿಸಿ ಅಥವಾ ಬೇರೆ ಕಲಂ ಕೆಳಗೆ ತಂದು ಇದರ ಬಗ್ಗೆ ಚರ್ಚೆಮಾಡಿ ಆಗ ನಾವು ಉತ್ತರ ಕೊಡುತ್ತೇವೆ,

ಶ್ರೀ ಕೆ ಹೆಚ್ ರಂಗನಾಥ್—ನನ್ನ ಸಲಹೆ ಏನೆಂದರೆ ಸಹಕಾರ ಮಂತ್ರಿಗೆ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಅವರ ಅಭಿಪ್ರಾಯವನ್ನು ಪುನರ್ವಿಮರ್ಶೆ ಮಾಡುವುದಕ್ಕೆ ಅವಕಾಶವಿದೆ. ಆದುದರಿಂದ ೫

* Not recorded as ordered by the Chair

ನಿಮಿಷ ಸಭೆಯನ್ನು ಅಡ್ಜರ್ನ್ ಮಾಡಿ ಮತ್ತೆ ಸೇರಿದರೆ ಆಯಿತು. ೫ ನಿಮಿಷ ಅಡ್ಜರ್ನ್ ಮಾಡಿ, ಇಲ್ಲಾ ಹೀಗೆ ನಡೆದುಕೊಂಡು ಹೋಗಬೇಕು ಅಂದರೆ ನಮ್ಮದೇನೂ ಅಭ್ಯಂತರವಿಲ್ಲ

ಅಧ್ಯಕ್ಷರು—ಮಾನ್ಯ ರಂಗನಾಥ್‌ರವರೆ, ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ ನಿಯಮ ೩೩ಳಿರ ವ್ಯಾಪ್ತಿಯಲ್ಲೇ ಚರ್ಚೆ ಮಾಡುತ್ತಾ ಇಲ್ಲ ಈ ದಿಶೆಯಲ್ಲಿ ಇನ್ನೂ ಹಲವಾರು ವಿಷಯಗಳಿವೆ ಪ್ರತಿ ವಿಷಯದಲ್ಲೂ ಹೀಗೆ ಒತ್ತಾಯಮಾಡಿ ಸರ್ಕಾರದಿಂದ ಉತ್ತರಬೇಕು ಎನ್ನತಕ್ಕಂಥ ನಿರ್ಧಾರವನ್ನೇ ಸದಸ್ಯರು ತೆಗೆದುಕೊಂಡರೆ ಸದನವನ್ನು ನಡೆಸುವುದಕ್ಕೆ ಸಾಧ್ಯವೇ ?

ಶ್ರೀ ಎಸ್ ಬಂಗಾರಪ್ಪ—ಎಲ್ಲಾ ವಿಷಯಗಳಲ್ಲೂ ಉತ್ತರಬೇಕು ಎಂದು ಕೇಳಲಿಲ್ಲ

ಶ್ರೀ ಕೆ ಹೆಚ್ ರಂಗನಾಥ್—ಈಗಿರತಕ್ಕ ವಾತಾವರಣದಲ್ಲಿ ಸ್ವಲ್ಪ ತೊಂದರೆ...

ಅಧ್ಯಕ್ಷರು—ಪ್ರತಿಯೊಂದರಲ್ಲೂ ಇದೇ ವಾತಾವರಣ ಬರುತ್ತದೆ

ಶ್ರೀ ಕೆ ಹೆಚ್ ರಂಗನಾಥ್—೫ ನಿಮಿಷ ಅಡ್ಜರ್ನ್ ಮಾಡಿ

ಅಧ್ಯಕ್ಷರು—ಪ್ರತಿಯೊಂದು ವಿಚಾರಕ್ಕೂ ಹೀಗೆ ಮಾಡುವುದಕ್ಕೆ ಬರುತ್ತದಯೇ ?

ಶ್ರೀ ಕೆ ಹೆಚ್ ರಂಗನಾಥ್—ನಾನು ಕೇಳಿಕೊಂಡೆ ಮಂದಿನದು ತಮ್ಮ ತೀರ್ಮಾನಕ್ಕೆ ಬಿಟ್ಟಿದ್ದು

ಶ್ರೀ ರಾಮಕೃಷ್ಣ ಹೆಗಡೆ—ಮಾನ್ಯ ರಂಗನಾಥ್‌ರವರಿಗೆ ಕೇಳಿಕೊಳ್ಳುತ್ತೇನೆ ಈ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯ ಅಥವಾ ಸರ್ಕಾರದ ನೀತಿಯನ್ನು ತಿಳಿದುಕೊಳ್ಳಲೇಬೇಕು ಎಂದು ಇದ್ದರೆ ಅದಕ್ಕೆ ಸ್ವಲ್ಪ ಅವಕಾಶ ಕೊಡಬೇಕು

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ—ಅಷ್ಟೂ ವಿವೇಚನಾಚಾರ ಇಲ್ಲವೇ ? ಸರ್ಕಾರದ ನೀತಿಗೆ ಸಂಬಂಧಪಟ್ಟ ಯಾವುದೇ ವಿಚಾರವನ್ನು ಮಾನ್ಯ ಸದಸ್ಯರು ಎತ್ತಬಹುದು, ಆ ಅಧಿಕಾರ ಅವರಿಗಿದೆ ಮತ್ತು ಅದಕ್ಕೆ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ಪಡೆಯತಕ್ಕ ಅಧಿಕಾರವೂ ಅವರಿಗೆ ಇದೆ ಅದನ್ನು ಇಲ್ಲ ಎಂದು ಯಾರೂ ಹೇಳುವುದಿಲ್ಲ ಆದರೆ ನಿಯಮ ೩೩ಳಿರ ಪ್ರಕಾರ ತಾವು ಅನೇಕ ಸಲ ಹೇಳಿದ್ದೀರಿ ಒಂದು ವಿಷಯವನ್ನು ಇಲ್ಲಿ ಎತ್ತಬಹುದು ಅಷ್ಟೆ ಆದರೆ ನೂರಾರು ವಿಚಾರಗಳು ಬರುತ್ತವೆ ನಾವೇನೂ ಬೃಹಸ್ಪತಿಗಳಲ್ಲ ಸರ್ಕಾರದ ನೀತಿಗೆ ಸಂಬಂಧಪಟ್ಟ ವಿಷಯಕ್ಕೆ ತಕ್ಷಣ ಉತ್ತರಕೊಡುವುದಕ್ಕೆ ಸಾಧ್ಯವಿಲ್ಲ ಮಾನ್ಯ ಬಂಗಾರಪ್ಪನವರು ಮಂತ್ರಿಗಳಾಗಿದ್ದರು, ಅವರಿಗೆ ಅನುಭವ ಉಂಟು ಅಕಸ್ಮಾತ್ತಾಗಿ ಒಂದು ವಿಚಾರವನ್ನು ಎತ್ತಬಹುದು ಗವರ್ನಮೆಂಟಿನ ಪಾಲಿಸಿಯನ್ನು ಕೂಡ ಕೇಳಬಹುದು, ಅದಕ್ಕೆ ನಾವು ಉತ್ತರ ಕೊಡುವುದಕ್ಕೆ ಆಗುತ್ತದೆ ಅದೇರೀತಿ ಅಡ್ಜರ್ನ್‌ಮೆಂಟ್ ಮೋಷನ್ ತರಬಹುದು ಬೆಂಗಳೂರಿಗೆ ಬೆಂಕಿ ಬಿದ್ದಿದೆ ಎಂದು ಹೇಳಿದರು ಅಡ್ಜರ್ನ್‌ಮೆಂಟ್ ಮೋಷನ್ ತರಬಹುದೂ, ಆಗ ನಾವು ಅದಕ್ಕೆ ಉತ್ತರ ಕೊಡಬೇಕಾಗುತ್ತದೆ ಅಥವಾ ಬಹಳ ಮಹತ್ವದ ವಿಚಾರವಾಗಿದ್ದರೆ ಬೇರೆ ಮೋಷನ್ ಮಂಜೂರಾಂತರ ಇಲ್ಲಿ ತರಬಹುದು, ಅದಕ್ಕೆ ಅವಕಾಶವಿದೆ ಈಗ ಯಾವುದಾದರೂ ಕಲಂ ಪ್ರಕಾರ ಎತ್ತಿದ್ದಕ್ಕೆ ಉತ್ತರ ಕೊಡಲೇಬೇಕು ಎಂದು ಹೇಳಿದರೆ ಸಾಧ್ಯವಾಗುವುದಿಲ್ಲ

ಶ್ರೀ ಎಸ್ ಬಂಗಾರಪ್ಪ—ಮಾನ್ಯ ಸಭಾಧ್ಯಕ್ಷರೆ, ನಾವೂ ಕೂಡ ಮಂತ್ರಿಗಳಾಗಿ ಕೆಲಸ ಮಾಡಿದ್ದೇವೆ ಕೆಲವು ಸಾರಿ ನೋಟೀಸುಗಳನ್ನು ಕೊಡದೇ ಹೋದರೂ ಕೂಡ ಸದನದಲ್ಲಿ ಪ್ರಸ್ತಾಪ ಮಾಡಿರತಕ್ಕ ವಿಷಯುಗಳಿಗೆ ಉತ್ತರ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ನಡೆಸಿಕೊಟ್ಟಿದ್ದೇವೆ ಈ ರೀತಿ ನಡೆದಿರುವುದನ್ನು ಎರಡೂ ಸದನಗಳಲ್ಲೂ ನಾನು ನೋಡಿದ್ದೇನೆ ಮೇಲ್ಮನೆಯಲ್ಲಿ ಸಭಾನಾಯಕನಾಗಿ ಕೆಲಸ ಮಾಡಿಸತಕ್ಕ ಅನುಭವವೂ ನನಗೆ ಇದೆ ನೀವು ಕೊಡಲೇಬೇಕು ಎಂದು ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಕಷ್ಟವಾಗುತ್ತದೆ ಹಾಗಾದರೆ ೩೩ಳಿನೇ ನಿಯಮ ಏಕೆ ಇರಬೇಕು?

ಅಧ್ಯಕ್ಷರು—ನಿಯಮ ೩೩ಳಿರ ಪ್ರಕಾರ ತಕ್ಷಣ ನೋಟೀಸನ್ನು ತಂದಿದ್ದೀರಿ, ತಕ್ಷಣಕ್ಕೆ ಸಾಕಷ್ಟು ಮಾಹಿತಿ ಇಲ್ಲ ಎಂದು ಹೇಳಿದರು.

ಶ್ರೀ ಎಸ್ ಬಂಗಾರಪ್ಪ—ಅದು ಉತ್ತರ ಅಲ್ಲ

ಅಧ್ಯಕ್ಷರು—ತಕ್ಷಣವೇ ಉತ್ತರ ಕೊಡಬೇಕು ಎಂದು ನಿಯಮದಲ್ಲಿ ಇಲ್ಲ, ಮಾಹಿತಿ ಒದಗಿಸುವುದಕ್ಕೆ ಸಮಯಬೇಕು ಎಂದು ಹೇಳಿದರು ಅಜೀಜ್‌ಸೇಠ್ ಸಾಹೇಬರು ಹೇಳಿದರು ೫-೧೦ ನಿಮಿಷ

ಸಮಯ ಕೊಡಿ ಎಂದು ಹೇಳಿದರು ಈಗ ತಯಾರಾಗಿ ಬಂದಿದ್ದಾರೆ ಆದುದರಿಂದ ತಕ್ಷಣ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿರುವುದು

ಶ್ರೀ ಎಸ್ ಬಂಗಾರಪ್ಪ—ನಮ್ಮ ಅಭಿಪ್ರಾಯವನ್ನು ತಾವು ಸಂಪೂರ್ಣವಾಗಿ ಕೇಳಬೇಕು ಮಾನ್ಯ ಜಾಲಪ್ಪನವರು ನಾವು ಹೇಳಿದ ಮೇಲೆ ಉತ್ತರ ಕೊಟ್ಟಿದ್ದಾರೆ ಆದರೆ ಅವರು ಉತ್ತರ ಹೇಳುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಿದರು ಅದಕ್ಕೆ ನಾವು ಹಠ ಹಿಡಿಯಬೇಕಾಯಿತು ಉತ್ತರವನ್ನು ಯಾವಾಗ ಕೊಡುತ್ತಾರೆ ಎಂದು ಹೇಳಲಿ ಸಿ ವಂಶ್ರ ಳಿನೇ ದರ್ಜೆ ನೌಕರರಿಗೆ ಕನ್ನಡದ ಪರೀಕ್ಷೆ ಕಡ್ಡಾಯ ಮಾಡತಕ್ಕ ಬಗ್ಗೆ ಯಾವಾಗ ಉತ್ತರ ಕೊಡುತ್ತಾರೆಂದು ಹೇಳಲಿಲ್ಲ ಇಂತಹ ಉದ್ದೇಶಕ್ಕೆ ಹೀಗೆ ಮಾಡಿದ್ದೇವೆಂದು ಹೇಳಿದರೆ ಕುಳಿತುಕೊಳ್ಳುತ್ತೇವೆ, ಉತ್ತರ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದರಿಂದ ಹಠ ಮಾಡಬೇಕಾಯಿತು. ತಮ್ಮ ವಿರುದ್ಧ ಮಾಡಿಲ್ಲ, ಸರ್ಕಾರದ ನೀತಿ ವಿರುದ್ಧ ಪ್ರತಿಭಟನೆ ಮಾಡಿದೆವು

ಶ್ರೀ ರಾಮಕೃಷ್ಣ ಹೆಗಡೆ—ಉತ್ತರ ಕೊಡುವುದಿಲ್ಲವೆಂದು ಎಂದೂ ಹೇಳಲಿಲ್ಲ

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ—ನಾನು ಏನು ಹೇಳಿದ್ದೇನೆ ಎನ್ನುವ ಅರಿವು ಇಟ್ಟುಕೊಂಡು ಹೇಳುತ್ತಿದ್ದೇನೆ ನಿಯಮ ೩೫ರ ಪ್ರಕಾರ ಎತ್ತಿ ತಕ್ಷಣ ಕೇಳಿದರೆ ಉತ್ತರ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದೇನೆ ಇದರಲ್ಲಿ ಉತ್ತರ ಕೊಡಲೇಬೇಕು ಅಂದರೆ ಕೇಳಿದ ತಕ್ಷಣ ಉತ್ತರ ಕೊಡುವುದಕ್ಕೆ ಸಾಧ್ಯವೇ ? ಉತ್ತರ ಕೊಡುತ್ತೇವೆ, ಉತ್ತರ ಕೊಡದೇ ಹೋದರೆ ಯಾವ ಮಾನ್ಯ ಸದಸ್ಯರೂ ಸರ್ಕಾರದ ಮೇಲೆ ಬಲಾತ್ಕಾರ ಮಾಡುವುದು ಸಾಧ್ಯವಿಲ್ಲ ಇದು ನೀತಿಗೆ ಸಂಬಂಧಪಟ್ಟ ವಿಚಾರ, ಇದಕ್ಕೆ ಎರಡು ದಿವಸ ಅವಕಾಶಬೇಕು, ಆಮೇಲೆ ಯೋಚನೆ ಮಾಡಿ ಉತ್ತರ ಕೊಡುತ್ತೇನೆ,

೨–೩೦ ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯ್ಲಿ,—ಈಗ ಮಾನ್ಯ ಮಂತ್ರಿಗಳು ರೂಲ್ ೩೫ರಲ್ಲಿ ಉತ್ತರ ಕೊಡಲೇಬೇಕು ಎಂದು ಒತ್ತಾಯ ಮಾಡತಕ್ಕ.....

ಶ್ರೀ ರಾಮಕೃಷ್ಣ ಹೆಗಡೆ.—ಪಾರ್ಲಿಮೆಂಟ್‌ನಲ್ಲಿ ಏನು ಮಾಡುತ್ತಾರೆಂಬುದು ನಿಮಗೆ ಗೊತ್ತಾ ? ೧೦ ದಿವಸಗಳವರೆಗೆ ಮಾತ್ರ ಮತ್ತೆ ಇಂತಹ ವಿಷಯಗಳನ್ನು ಎತ್ತುತ್ತಿದ್ದರೂ ಒಂದು ದಿನವೂ ಅದಕ್ಕೆ ಉತ್ತರ ಸಿಕ್ಕುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ರೂಲ್ ೩೫ ರ ಕೆಳಗೆ ಇವತ್ತೇ ಉತ್ತರ ಕೊಡಬೇಕೆಂದು ಒತ್ತಾಯ ಮಾಡುವುದಕ್ಕಾಗುವುದಿಲ್ಲ ಎಂಬುದು ನಮಗೂ ಗೊತ್ತಿದೆ. ಆದರೆ ಈ ದಿವಸ ಈ ಪ್ರಶ್ನೆಯನ್ನು ಎತ್ತಿದ್ದಾರೆ, ಅದಕ್ಕೆ ಇವತ್ತೇ ಉತ್ತರ ಕೊಡಿ ಎಂಬುದಾಗಿ ಒತ್ತಾಯ ಮಾಡುತ್ತಿಲ್ಲ. ಅದಕ್ಕೆ ೨ ದಿವಸಗಳು ಸಮಯವನ್ನು ಬೇಕಾದರೆ ತೆಗೆದುಕೊಳ್ಳಿ. ಆಡಳಿತದಲ್ಲಿ ಇದು ಅಗತ್ಯ ಇದೆ, ಆದರೆ ದೆಂಗಳೂರು ಬಂದ್ ಆಗಿರುವಂತಹ ಸಂದರ್ಭದಲ್ಲಿ ಈ ವಿಚಾರದಲ್ಲಿ ಡಾ॥ ರಾಜಕುಮಾರ್ ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ. ಹಾಗೆಂದ ಮೇಲೆ ಇದು ಸಚಿವ ಸಂಪುಟದ ಸಭೆಯಲ್ಲಿ ಚರ್ಚೆಯಾಗಿರಬೇಕು. ಡಾ॥ ರಾಜಕುಮಾರ್‌ರವರ ನೇತೃತ್ವದಲ್ಲಿ ಸಮಿತಿ ನೇಮಕ ಆದ ಮೇಲೆ ಈ ಸಭೆ ಸೇರಿತ್ತಿದೆ. ಬೆಂಗಳೂರು ಬಂದ್ ನಡೆಯುತ್ತಿದೆ. ಈ ಸಂದರ್ಭದಲ್ಲಿ ಶಾಂತಿ ಸಮಾಧಾನ ಕರ್ನಾಟಕ ರಾಜ್ಯದಲ್ಲಿ ನೆಲಸುವಂತಹ ಅಗತ್ಯತೆ ಇದೆ. ಆದ್ದರಿಂದ ಈ ಸಭೆ ಪ್ರಕೋಪಕ್ಕೆ ಹೋದಾಗ ಸಮಾಧಾನ ತಂದುಕೊಳ್ಳತಕ್ಕಂತಹ ಕರ್ತವ್ಯ ಅವರದ್ದೂ ಇದೆ. ಅದಕ್ಕೆ ಸಹಕಾರವನ್ನು ನಾವೂ ಕೊಡಬೇಕು. ಇದು, ಭಾಷಾ ನೀತಿ ಇದರ ಬಗ್ಗೆ ಪ್ರಾಮಕವಾದ ಒಂದು ಹೇಳಿಕೆಯನ್ನು ಕೊಡಬೇಕು. ಆದರೆ ಇವತ್ತೇ ಕೊಡಿ ಎಂಬುದಾಗಿ ಒತ್ತಾಯ ಮಾಡುತ್ತಿಲ್ಲ. ಆ ರೀತಿ ಒತ್ತಾಯ ಮಾಡಿದರೂ ಕಷ್ಟ. ಆದರೆ ಹೊಸ ಹೆನ್ನೆಲೆಯಲ್ಲಿ ಬೆಂಗಳೂರು ಬಂದ್ ಆಗಿದೆ ಎಂಬುದು ನಿಮ್ಮ ಸರ್ಕಾರದ ಆಲೋಚನೆಗೆ ಬಂದಿದೆಯೇ ? ಇದರ ಬಗ್ಗೆ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿ ಎಂದು ಅಷ್ಟೇ, ಕೇಳುತ್ತಿದ್ದಾರೆ. ಆದರೂ ಕೂಡ ಶೂನ್ಯವೇಳೆ ವಾರ್ತಾಪತ್ರಿಕಾ ನಿಯಮ ೩೫ರ ಅಯಿತು. ಹಿಂದೆ ಶೂನ್ಯವೇಳೆಯಲ್ಲಿ ವಿಷಯದ ಬಗೆ ಸಭೆಯಲ್ಲಿ ಪ್ರಕೋಪಕ್ಕೆ ಹೋದಾಗ ಸಭಾಪತಿಯವರು ತಮ್ಮ ಛೇಂಬರ್‌ಗೆ ಎರಡೂ ಕಡೆಯವರನ್ನು ಕರೆಸಿ ಸಮಾಧಾನ ಪಡಿಸಿ ಸಭೆಯನ್ನು ಹತೋಟಿಗೆ ತಂದು ಸಭೆಯಲ್ಲಿ ಶಾಂತಿಯನ್ನು

ತಂದು ನಮ್ಮ ದಿಯಿಂದ ಸಭೆಯ ಕಾರ್ಯಕಲಾಪಗಳು ಮುಂದುವರಿಸಿರುವಂತಹ ಪ್ರಸಂಗಗಳು ಅನೇಕ ಇದೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳ ಉತ್ತರ ಎರಡು ದಿವಸಗಳು ಆದ ಮೇಲೆ ಆವಾಗಲೂ ಕೂಡ ಆಲೋಚನೆ ಮಾಡಿ ಉತ್ತರ ಕೊಡುತ್ತೇವೆಂದು ಹೇಳಿದರೆ ನಾವು ಇನ್ನೇನು ಹೇಳಬೇಕೆಂಬುದೂ ಗೊತ್ತಾಗುವುದಿಲ್ಲ. ನಮ್ಮ ರಕ್ಷಣೆಗೆ ತಾವು ಬರಬೇಕು.

ಶ್ರೀ ಕೆ.ಎಚ್., ರಂಗನಾಥ್.—ನಾನು ತಮ್ಮನ್ನು ೫ ನಿಮಿಷ ಸಭೆಯನ್ನು ಅಡ್ಜರ್ನ್ ಮಾಡಿ ಎಂಬುದಾಗಿ ಕೇಳುವಾಗ ತಾವು ಕೊಟ್ಟಂತಹ ತೀರ್ಪು ಸರಿಯಲ್ಲ ಅಂತ ನಾನು ಕೇಳಲಿಲ್ಲ. ಅದರೆ ಇಂದೂ ಎಂದೂ ನಡೆಯದೇ ಇದ್ದಂತಹ ವಿಶೇಷವಾದ ವಾತಾವರಣ ನಿರ್ಮಾಣವಾಗಿದೆ. ಆದ್ದರಿಂದ ಮೊದಲು ತಮ್ಮನ್ನು ಕೇಳಿದ ನಂತರ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳೋಣ ಅಂತ ಇದ್ದೆ. ಆದರೆ ಈಗ ಮುಖ್ಯಮಂತ್ರಿಗಳು ಇದು ನೀತಿ ವಿಚಾರ, ಎರಡು ದಿವಸಗಳಾದ ಮೇಲೆ ಯೋಚನೆ ಮಾಡಿ ಹೇಳುತ್ತೇನೆಂದು ಹೇಳಿದ್ದಾರೆ. ಇದನ್ನು ಮೊದಲೇ ಹೇಳಿದ್ದರೆ ಇಷ್ಟು ದೂರ ಹೋಗುತ್ತಿರಲಿಲ್ಲವೆಂದೂ ತಾವಾದರೂ ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಆಗಲೇ ಹೇಳಿದ್ದೇನೆ. ಇನ್ನೇನು ಹೇಳಬೇಕು ಹೇಳಿ ?

ಅಧ್ಯಕ್ಷರು.—ಎರಡು ದಿವಸಗಳಲ್ಲಿ ಉತ್ತರವನ್ನು ಕೊಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದುದರಿಂದ ಈ ವಿಷಯವನ್ನು ಇದನ್ನು ಇಲ್ಲಗೇ ನಿಲ್ಲಿಸಿ.

ಶ್ರೀ ಎಚ್. ಗಂಗಾಧರನ್.—ಉತ್ತರ ಕೊಡಲಿ ಬಿಡಲಿ. ಆದರೆ ಕನ್ನಡದ ಬಗ್ಗೆ ವಿಷಯ ಇರುವುದರಿಂದ ಇದರ ಬಗ್ಗೆ ಈ ಸರ್ಕಾರ ಉದಾರ ನೀತಿಯನ್ನು ತೋರಿಸಿ, ನಮ್ಮ ರಾಜ್ಯಕ್ಕೆ ಗೌರವ ತಂದುಕೊಟ್ಟಂತಹ ಒಬ್ಬ ಕಲಾವಿದರಾದ ಡಾ॥ ರಾಜಕುಮಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ, ಇದರ ಬಗ್ಗೆ ಸಲಹೆ ಕೊಡಿ ಎಂಬುದಾಗಿ ಸಮಿತಿಯನ್ನು ನೇಮಕ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ತಾವಲೂ ಸಮಿತಿ ಎಂಬುದಾಗಿ ಇರುವಾಗ ಮತ್ತೊಂದು ಸಮಿತಿ ಏತಕ್ಕೆ ಬೇಕು ?

ಶ್ರೀ ಎಚ್. ಗಂಗಾಧರನ್.—ಒಬ್ಬ ಕನ್ನಡದ ಕಲಾವಿದರಿಗೆ ನಮ್ಮ ರಾಜ್ಯ ಸರ್ಕಾರ ಕೊಟ್ಟಿರ ತಕ್ಕಂತಹ ಅತ್ಯಂತ ಗೌರವ, ಪ್ರೀತಿ ಇನ್ನು ಬೇರೆ ಯಾವ ರಾಜ್ಯದಲ್ಲೂ ಕೊಟ್ಟಿಲ್ಲ. ಅವರು ಏನೊಂದು ವರದಿಯನ್ನು ಕೊಡುತ್ತಾರೋ, ಏನೊಂದು ಅಭಿಪ್ರಾಯವನ್ನು ಕೊಡುತ್ತಾರೋ, ಅದನ್ನು ಸರ್ಕಾರ ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂಬುದಾಗಿ ಪತ್ರಿಕೆಗಳಲ್ಲಿ ಬಂದದ್ದನ್ನು ಓದಿದ್ದೇವೆ. ಆದಕ್ಕೆ ತಾವು ಸಹ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಹಕಾರ ನೀಡಬೇಕು. ಅದರ ಜೊತೆಗೆ ಡಾ. ರಾಜಕುಮಾರ್ ರವರ ನೇತೃತ್ವದ ಸಮಿತಿ ಏನೊಂದು ವರದಿಯನ್ನು ಕೊಡುತ್ತಾರೋ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಾವೆಲ್ಲರೂ ಸೇರೋಣ. ಆದಕ್ಕೆ ನಮ್ಮ ಮಿತ್ರರು ಸಹಕಾರವನ್ನು ಕೊಟ್ಟು ಅವರಿಂದ ಉತ್ತರವನ್ನೂ ನಿರೀಕ್ಷೆ ಮಾಡೋಣ. ಅವರಿಗೆ ಗೌರವ ಕೊಡೋಣ ಅವರ ಅಧ್ಯಕ್ಷತೆಯಲ್ಲಿ ರಚನೆಯಾಗಿರತಕ್ಕಂತಹ ಸಮಿತಿಗೆ ಮಾನ್ಯತೆಯನ್ನು ಕೊಡೋಣ. ಕನ್ನಡದ ಬಗ್ಗೆ ಅಭಿಮಾನ ಇದ್ದರೆ, ಕನ್ನಡ ಭಾಷೆಯ ಮೇಲೆ ಅಭಿಮಾನ ಇದ್ದಂತಹವರು ಇದಕ್ಕೆ ಗೌರವ ಕೊಡಬೇಕೆಂದು ಪನ್ನ ಮಿತ್ರರಲ್ಲಿ ಏನಂತಿ ಮಾಡಿಕೊಂಡು ಅವರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ಸು ಬಂದು ಕುಳಿತುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈಗ ತಾನೆ ಉತ್ತರ ಕೊಟ್ಟಿದ್ದಾರೆ. ಈ ಉತ್ತರದ ಬಗ್ಗೆ ಒಂದು ವಾತನ್ನು ಮಾತ್ರ ಹೇಳಂತ್ತೇನೆ. ಈವರೆಗೆ ಶ್ರೀಮಾನ್ ಗಂಗಾಧರನ್ ರವರು ಡಾ. ರಾಜಕುಮಾರ್ ರವರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ಸಮಿತಿಯು ಕೊಡತಕ್ಕಂತಹ ಆದೇಶವನ್ನು ಪಾಲನೆ ಮಾಡುತ್ತೇವೆ ಎಮ್ಮವ ಅಭಿಪ್ರಾಯವನ್ನು ಹೇಳಿದ್ದಾರೆ. ಅಥವಾ ಅವರು ಕೊಟ್ಟಂತಹ ವರದಿಯನ್ನು ಪಾಲನೆ ಮಾಡುತ್ತೇವೆ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಲಿ. ಆ ಮಾತನ್ನು ಮುಖ್ಯ ಮಂತ್ರಿಗಳ ಬಾಯಿಂದ ಹೇಳಿಸಿ. ಆದರೆ ಅವರು ಕವಿಂಟ ಮಾಡಿದ್ದೇವೆಂದು ಹೇಳಿದ್ದಾರೆ. ಮುಂದೆ ಏನು ಮಾಡುತ್ತೇವೆಂಬುದನ್ನು ಹೇಳಲಿಲ್ಲ.

ಶ್ರೀ ಎಚ್. ಗಂಗಾಧರಪ್ಪ.—ಡಾ. ರಾಜಕುಮಾರ್‌ರವರಿಗೆ ಗೌರವವನ್ನು ಕೊಡುವುದ ಕ್ಕೋಸ್ಕರವಾಗಿ ಕಲಾವಿದರನ್ನು ರಕ್ಷಣೆಮಾಡುವುದಕ್ಕೋಸ್ಕರವಾಗಿ ಈ ಮಾತನ್ನು ಹೇಳುತ್ತೇನೆ.ಅವರಿಗೆ ಗೌರವ ಕೊಡಬೇಕು.

ಶ್ರೀಮಾನ್ ಎಸ್. ಬಂಗಾರಪ್ಪ.—ಡಾ. ರಾಜಕುಮಾರ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿರಬಹುದು. ಅವರು ಕೊಟ್ಟಂತಹ ವರದಿಯನ್ನು ಒಪ್ಪೇ ಒಪ್ಪುತ್ತೇವೆಂದು ಹೇಳಿಲ್ಲ ; ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಕ್ಷಮಿಸಬೇಕು, ನಾವು ಕೆಲವೊಮ್ಮೆ ನಿಯಮಾವಳಿಗಳನ್ನು ಬಿಟ್ಟು ಮಾತನಾಡಿ ನಿಮಗೆ ನೋವು ಮಾಡಿರಬಹುದು. ಈ ನಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸುವಾಗ ಕನ್ನಡದ ಬಗ್ಗೆ ಉದ್ದೇಶವನ್ನು ಇಟ್ಟುಕೊಂಡೇ ಮಾಡಿದ್ದೇವೆಂದು ತಾವು ಅರ್ಥ ಮಾಡಿಕೊಂಡಿದ್ದಿರೆಂದು ನಾನು ಭಾವಿಸುತ್ತೇನೆ. ಬೇರೆ ಇನ್ನು ಯಾವುದೇ ಉದ್ದೇಶ ನನಗಾಗಲೀ ಅಥವಾ ನನ್ನ ಮಿತ್ರರಿಗಾಗಲೀ ಇಲ್ಲವೆಂಬುದನ್ನು ಸ್ಪಷ್ಟಪಡಿಸಿಬಿಡುತ್ತಿದ್ದೇನೆ. ಇದು ತಮ್ಮ ವಿರುದ್ಧ ಅಲ್ಲ. ಸರ್ಕಾರದ ನೀತಿಯನ್ನು ಪ್ರತಿಭಟಿಸಿ ಮಾಡತಕ್ಕ ಒಂದು ಕ್ರಮ ಅಷ್ಟೆ. ಮುಖ್ಯ ಮಂತ್ರಿಗಳವರು ಈಗಾಗಲೇ ಇದರ ಬಗ್ಗೆ, ಇದು ಒಂದು ನೀತಿಯ ಪ್ರಶ್ನೆಯಾಗಿರುವುದರಿಂದ, ಅದರ ಬಗ್ಗೆ ೨ ದಿವಸಗಳಲ್ಲಿ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿರುವುದರಿಂದ ಕಾಲಾವಕಾಶವನ್ನು ಸರ್ಕಾರಕ್ಕೆ ಕೊಡೋಣ. ನಾವು ಕೂಡ ಈ ಬಗ್ಗೆ ಕೊಟ್ಟಂತಹ ಅಭಿಪ್ರಾಯವನ್ನು ಅನುಸರಿಸಿ ಧರಣಿಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ, ಸರ್ಕಾರದಿಂದ ಉತ್ತರವನ್ನೂ ಸಹ ಆದಷ್ಟು ಬೇಗ ಬರುತ್ತದೆಂದು ನಿರೀಕ್ಷೆ ಮಾಡುತ್ತಿದ್ದೇವೆ. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಅನಂತರ ಕ್ರಾಂತಿರಂಗ ಪಕ್ಷದ ಸದಸ್ಯರಾದ ಶ್ರೀಮಾನ್ ಎಂ. ರಾಮಪ್ಪ, ಶ್ರೀ ಜೆ.ಎಂ. ಕಾನಡೆ, ಶ್ರೀ ಶಿವಮೂರ್ತಿ, ಹಾಗೂ ಶ್ರೀ ಎಂ. ಸ್ವಾಮಿರಾವ್ ರವರು ತಮ್ಮ ತಮ್ಮ ಸ್ಥಳಗಳಿಗೆ ನಿರ್ಗಮಿಸಿದರು).

STATEMENT BY THE MINISTER

reg : Bagalkot Cement Factory Employees Strike

SRI AJEEJ SAIT.—I may be permitted to make the following statement :

The President, B.C.C. Workers Union and B.C.C. Staff Union gave a Charter of Demands containing about 14 demands vide their letter of 22nd November 1982 and stated that the workmen will go on indefinite strike with effect from 9-12-1982if the demands are not settled. Certain other four demands were included in this Charter of Demands later, on 26-11-1982.

SRI G. M. KANADE.--Kannada, Kannada, Kannada. ಕನ್ನಡದಲ್ಲಿ ಮಾತನಾಡಿ.

(Interruption)

ಶ್ರೀ ಜಿ. ಎಂ. ಕಾನಡೆ.—ಕನ್ನಡದಲ್ಲಿ ಹೇಳಬೇಕು. ನಮಗೆ ನಿಮ್ಮ ಇಂಗ್ಲಿಷ್ ಏನೂ ಅರ್ಥವಾಗುವುದಿಲ್ಲ. ಕನ್ನಡದಲ್ಲಿ ಹೇಳಬೇಕು, ಕನ್ನಡ, ಕನ್ನಡ, ಕನ್ನಡ, ಕನ್ನಡ, ಕನ್ನಡ, ಕನ್ನಡ.....

SRI AZIZ SAIT.--If you do not allow to speak, I am not going to make the statement. There should be some limit for this. I do not know how to write and read Kannada. There are 45 percent linguistic minorities speaking Uru. Telugu, Tamil, Marathi and so on. These people are insisting...

ಅಧ್ಯಕ್ಷರು.—ದಯವಾಡಿ ಕುಳಿತುಕೊಳ್ಳಿ.